ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ಅಕ್ಟೋಬರ್ 16, 2021

ಸಂಪುಟ : 48 ಸಂಚಿಕೆ : 155 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com

## ಐತಿಹಾಸಿಕ ಚಿತ್ರದುರ್ಗದಲ್ಲಿ ಶರಣ ಸಂಸ್ಕೃತಿ ಉತ್ಸವ

### ಪುಷ್ಪಾಲಂಕೃತ ವಾಹನದಲ್ಲಿ ಮುರುಘಾ ಶರಣರ ಮೆರವಣಿಗೆ, ಉತ್ಸವದಲ್ಲಿ ಕಲಾ ತಂಡಗಳ ವೈಭವ, ಹರ್ಷೋದ್ಗಾರ

ಚಿತ್ರದುರ್ಗ, ಅ.15- ಐತಿಹಾಸಿಕ ನಗರ ಚಿತ್ರದುರ್ಗವು ಪ್ರತಿವರ್ಷದಂತೆ ಈ ವರ್ಷವೂ ಶರಣ ಸಂಸ್ಕೃತಿ ಉತ್ಸವ ಅನೇಕ ವಿಶೇಷತೆಗಳಿಗೆ ಸಾಕ್ಷಿಯಾಯಿತು.

ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರ ನೇತೃತ್ವದಲ್ಲಿ ಅದ್ಧೂರಿ ಜನಪದ ಜಾತ್ರೆಯೇ ನಡೆ ಯಿತು. ಸಹಸ್ರಾರು ಭಕ್ತ ಸಮೂಹ ಈ ಸನ್ನಿವೇಶವನ್ನು ಕಣ್ತುಂಬಿಕೊಂಡರು.

ಮುರುಘಾ ಶರಣರು ಶ್ರೀ ಮುರುಗಿ ಶಾಂತವೀರ ಸ್ವಾಮಿಗಳ ಗದ್ದುಗೆಯ ದರ್ಶನ ಪಡೆದು ಶ್ರೀಮಠದ ಪ್ರಾಂಗಣದಲ್ಲಿ ಸಿಂಗರಿ ಸಿದ್ದ ಪುಷ್ಪಾಲಂಕೃತ ವಾಹನದ ಕಡೆ ಸಾಗಿ ನಾಡಿನ ನಾನಾ ಮಠಗಳ ಸ್ವಾಮಿಗಳು, ಬಸವ ಭಕ್ತರು, ಸಾರ್ವಜನಿಕರ ಹರ್ಷೋದ್ಗಾರಗಳ ನಡುವೆ ವಾಹನವನ್ನು ಏರಿದರು.

ಜನಪದ ಕಲಾಮೇಳಕ್ಕೆ ಕನಕ ಪುರ ಶ್ರೀ ಮರಳೇ ಗವಿಮಠದ ಡಾ. ಶ್ರೀ ಮುಮ್ಮಡಿ ಶಿವರುದ್ರ ಸ್ವಾಮಿಗಳು



ಉತ್ಸವಕ್ಕೆ ಚಮ್ಮಾಳ ಬಾರಿಸುವ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಶರಣ ಸಂಸ್ಕೃತಿ ಉತ್ಸವ 2021ರ ಗೌರವಾಧ್ಯಕ್ಷ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತರುದ್ರೇಶ್ವರ ಸ್ವಾಮೀಜಿ, ವಿವಿಧ ಮಠಾಧೀಶರು ಹರ-ಗುರು-ಚರ ಮೂರ್ತಿಗಳು ಉಪಸ್ಥಿತರಿದ್ದರು.

ನಂತರ ಉತ್ಸವ ಸಮಿತಿ ಸೇರಿದಂತೆ ನಾನಾ ಜಾತಿ, ಧರ್ಮಗಳ ಮುಖಂಡರು ಎಸ್.ಜೆ.ಎಂ. ಆಡಳಿತ ಮಂಡಳಿಯ ಸದಸ್ಯರು, ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಶರಣರಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ಜನತೆ ಮತ್ತು ಕಲಾತಂಡಗಳು ಮುಂಚೂಣಿಯಲ್ಲಿ ಶ್ರೀಗಳ ಮೆರವಣಿಗೆಗೆ ಸಾಥ್ ನೀಡಿದರು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ವಿವಿಧ ಪ್ರಕಾರದ ಜಾನಪದ ಕಲಾತಂಡಗಳು ತಮ್ಮದೇ ಆದ ವಿಶಿಷ್ಟ ಭಂಗಿಯ ಪ್ರದರ್ಶನ ನೀಡುತ್ತಾ ಸಾಗಿದ ದೃಶ್ಯ ಸುಮಾರು ಎರಡು ಕಿಲೋಮೀಟರ್‌ನಷ್ಟು ಉದ್ದ ಸಾಗಿತು. ಹಲವಾರು ತಂಡಗಳು ತಮ್ಮದೇ ಕಲೆ ಪ್ರದರ್ಶಿಸುತ್ತಾ ಸಾಗುತ್ತಿದ್ದ ದೃಶ್ಯವನ್ನು ರಸ್ತೆ ಬದಿಯಲ್ಲಿ, ಮನೆಯ ಮಹಡಿಗಳ ಮೇಲೆ ನಿಂತು ವೀಕ್ಷಿಸುತ್ತಿದ್ದ ಜನತೆಗೆ ಖುಷಿ ಕೊಟ್ಟಿತು.

ಇದೇ ಸಂದರ್ಭದಲ್ಲಿ ಚಿತ್ರದುರ್ಗ ನಗರಸಭಾ ಅಧ್ಯಕ್ಷರಾದ ಶ್ರೀಮತಿ ತಿಪ್ಪಮ್ಮ ವೆಂಕಟೇಶ್ ಅವರು ಶ್ರೀಗಳಿಗೆ ಬೃಹತ್ ಹೂವಿನ ಹಾರವನ್ನು ಜೆ.ಸಿ. (2ನೇ ಪುಟಕ್ಕೆ)

## ಅಂತರಂಗದ ಕೆಡುಕ ಕೊಂದರೆ ವಿಜಯದಶಮಿ ಅರ್ಥಪೂರ್ಣ

### ಅಂಬುಛೇದನ ನೆರವೇರಿಸಿದ ಡಿಸಿ ಮಹಾಂತೇಶ್ ಬೀಳಗಿ

ದಾವಣಗೆರೆ, ಅ. 14 - ಬಾಹ್ಯ ಜಗತ್ತಿನಂತೆ ಅಂತರಂಗದಲ್ಲೂ ಒಳಿತು ಹಾಗೂ ಕೆಡುಕಿನ ಸಂಘರ್ಷ ನಿರಂತರವಾಗಿ ನಡೆಯುತ್ತಿರುತ್ತದೆ. ಆಂತರಿಕ ಸಂಘರ್ಷದಲ್ಲಿ ಕೆಡುಕನ್ನು ಕೊಂದು, ಒಳಿತಿನ ಗೆಲುವು ಸಾಧಿಸಿದರೆ ವಿಜಯದಶಮಿ ಅರ್ಥಪೂರ್ಣವಾಗುತ್ತದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ.

ವಿಶ್ವ ಹಿಂದೂ ಪರಿಷತ್ ವತಿಯಿಂದ ಸಾರ್ವಜನಿಕ ವಿಜಯದಶಮಿ ಮಹೋತ್ಸವದ ಅಂಗವಾಗಿ ನಗರದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಆಯೋಜಿಸಲಾಗಿದ್ದ ಬನ್ನಿ ಮುಡಿಯುವ ಕಾರ್ಯಕ್ರಮದಲ್ಲಿ ಅಂಬುಛೇದನ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಒಳಿತು ಹಾಗೂ ಕೆಡುಕಿನ ನಡುವೆ ನಿರಂತರವಾಗಿ ಮಹಾ ಯುದ್ಧ ನಡೆಯುತ್ತಾ ಬಂದಿದೆ. ಅಂತಿಮವಾಗಿ ಗೆಲ್ಲುವುದು ಒಳಿತೇ ಎಂಬುದರ ಸಂಕೇತವಾಗಿ ವಿಜಯ ದಶಮಿ ಆಚರಿಸಲಾಗುತ್ತದೆ ಎಂದು ತಿಳಿಸಿದರು.

ಹಿಂದೂ ಜಾಗರಣಾ ವೇದಿಕೆಯ ಮಾತೃ ಸುರಕ್ಷಾ ರಾಜ್ಯ ಸಂಚಾಲಕ ಶಿವಾನಂದ ಬಡಿಗೇರ್ ಪ್ರಧಾನ ಭಾಷಣ ಮಾಡಿ, ರಾಷ್ಟ್ರೀಯ ವಿಚಾರಧಾರೆಗಳನ್ನು ಪ್ರತಿಯೊಬ್ಬರಿಗೂ ಕಲಿಸುವ ಮುಕ್ತ (2ನೇ ಪುಟಕ್ಕೆ)


### ಆರ್‌ಎಸ್‌ಎಸ್ ರಾಷ್ಟ್ರೀಯ ವಿಚಾರಧಾರೆಯ ಮುಕ್ತ ವಿವಿ

ರಾಷ್ಟ್ರೀಯ ವಿಚಾರಧಾರೆಗಳನ್ನು ಪ್ರತಿಯೊಬ್ಬರಿಗೂ ಕಲಿಸುವ ಮುಕ್ತ ವಿವಿಯಂತೆ ಇರುವ ಆರ್‌ಎಸ್‌ಎಸ್ ಅನ್ನು ಕೆಲವು ರಾಜಕಾರಣಿಗಳು ಈಗಲೂ ಟೀಕಿಸುತ್ತಿದ್ದಾರೆ. ಮಾಜಿ ಪ್ರಧಾನಿ ನರಸಿಂಹರಾವ್ ಅವರು ಆರ್‌ಎಸ್‌ಎಸ್ ಅನ್ನು (2ನೇ ಪುಟಕ್ಕೆ)

### ಕೊರೊನಾ ನಿರ್ಬಂಧ ಗಾಳಿಗೆ ತೂರಿದರೆ ಕ್ರಮ : ಡಿಸಿ

ಕೊರೊನಾ ನಿರ್ಬಂಧಗಳನ್ನು ಗಾಳಿಗೆ ತೂರಿದರೆ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದ್ದಾರೆ. ಚರ್ಚುಗಳಲ್ಲಿ ಅಷ್ಟೊಂದು ಜನ ಸೇರಿದ್ದಾರೆ ಎಂದಾಗ (2ನೇ ಪುಟಕ್ಕೆ)

## ಜಿಲ್ಲೆಗೆ ಇಂದು ಮುಖ್ಯಮಂತ್ರಿ



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇಂದು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕುಗಳಿಗೆ ಆಗಮಿಸಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಬೆಳಿಗ್ಗೆ 11.30ಕ್ಕೆ ಹೆಲಿಕ್ಯಾಪ್ಟರ್ ಮೂಲಕ ಆಗಮಿಸಲಿರುವ ಮುಖ್ಯಮಂತ್ರಿಗಳು, ನ್ಯಾಮತಿ ತಾಲ್ಲೂಕು ಸುರಹೊನ್ನೆ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜು ಆವರಣದಲ್ಲಿ ಹಮ್ಮಿಕೊಳ್ಳಲಾಗಿರುವ ಸಮಾರಂಭದಲ್ಲಿ ಫಲಾನುಭವಿಗಳಿಗೆ ವಿವಿಧ ಸರ್ಕಾರಿ ಸೌಲಭ್ಯಗಳನ್ನು ವಿತರಿಸಿ, ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ.

ಮಧ್ಯಾಹ್ನ 12.55ಕ್ಕೆ ಹೊನ್ನಾಳಿ ತಾಲ್ಲೂಕು ಕುಂದೂರು (2ನೇ ಪುಟಕ್ಕೆ)

## ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಕುಸಿತ

**ಮಾನದಂಡ ಅವೈಜ್ಞಾನಿಕ ಎಂದು ಕೇಂದ್ರದ ಆಕ್ಷೇಪ**

ನವದೆಹಲಿ,ಅ.15- ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕ ಕಡಿಮೆ ಮಾಡಿರುವುದಕ್ಕೆ ಆಕ್ಷೇಪಿಸಿರುವ ಕೇಂದ್ರ ಸರ್ಕಾರ, ಸೂಚ್ಯಂಕಕ್ಕೆ ಬಳಸಲಾಗಿರುವ ವಿಧಾನ ಅವೈಜ್ಞಾನಿಕ ಎಂದು ಹೇಳಿದೆ.

ಹಸಿವಿನ ಸೂಚ್ಯಂಕದಲ್ಲಿ ಭಾರತ 116 ದೇಶಗಳಲ್ಲಿ 101ನೇ ಸ್ಥಾನಕ್ಕೆ ಕುಸಿದಿದೆ ಎಂದು ತಿಳಿಸಲಾಗಿತ್ತು. 2020ರಲ್ಲಿ ಭಾರತ 94ನೇ ಸ್ಥಾನದಲ್ಲಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ದೂರವಾಣಿಯಲ್ಲಿ ಕರೆ ಮಾಡಿ ವರದಿ ರೂಪಿಸಲಾಗಿದೆ. ಗ್ಲೋಬಲ್ ಹಂಗರ್ ರಿಪೋರ್ಟ್, ಕನ್ಸರ್ನ್ ವರ್ಲ್ಡ್ ವೈಡ್ ಹಾಗೂ ವೆಲ್ಟ್ ಹಂಗರ್‌ಲೈಫ್‌ಗಳು ವರದಿ ರೂಪಿಸುವಾಗ ಸೂಕ್ತ ಎಚ್ಚರಿಕೆ ವಹಿಸಿಲ್ಲ ಎಂದು ಹೇಳಿದೆ.

ದೂರವಾಣಿ ಕರೆ ಮಾಡಿ ನಾಲ್ಕು ಪ್ರಶ್ನೆಗಳ ಆಧಾರದ ಮೇಲೆ ಅಭಿಪ್ರಾಯ ಸಂಗ್ರಹಿಸಿ ವರದಿ ರೂಪಿಸಲಾಗಿದೆ. (5ನೇ ಪುಟಕ್ಕೆ)

## ಜಂಬೂಸವಾರಿಗೆ ಸಿಎಂ ಚಾಲನೆ

ಮೈಸೂರು ನಾಡಹಬ್ಬ ದಸರಾ ಪ್ರಯುಕ್ತ ಆಯೋಜಿಸಲಾಗಿದ್ದ ವಿಶ್ವವಿಖ್ಯಾತ ಜಂಬೂಸವಾರಿ ಹಾಗೂ ವಿಜಯದಶಮಿ ಆಚರಣೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಚಾಲನೆ ನೀಡಿದರು. ರಾಜವಂಶಸ್ಥರಾದ ಯದುವೀರ ಒಡೆಯರ್, ಸಚಿವ ಎಸ್. ಟಿ. ಸೋಮಶೇಖರ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.





**ಹರಿಹರದಲ್ಲಿ ದಸರಾ** ದಸರಾ ಮಹೋತ್ಸವ ಸಮಿತಿಯ ವತಿಯಿಂದ ಹರಿಹರದಲ್ಲಿ ವಿಜಯದಶಮಿ ಆಚರಿಸಲಾಯಿತು. ಗಜರಾಜ ಹಾಗೂ ಚಾಮುಂಡಿ ಮೂರ್ತಿಗೆ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ಇತರೆ ಗಣ್ಯರು ಪೂಜೆ ಸಲ್ಲಿಸಿದರು.

## ಪೆಟ್ರೋಲ್ - ಡೀಸೆಲ್ ಬೆಲೆ 35 ಪೈಸೆ ಹೆಚ್ಚಳ

ನವದೆಹಲಿ, ಅ. 15 - ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಶುಕ್ರವಾರ ಏರಿಕೆಯಾಗಿದ್ದು, ಲೀಟರ್‌ಗೆ 35 ಪೈಸೆ ಹೆಚ್ಚಿಸಲಾಗಿದೆ.

ಸತತ ಎರಡನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು ತಲಾ 35 ಪೈಸೆ ಹೆಚ್ಚಿಸಲಾಗಿದೆ. ಅಕ್ಟೋಬರ್ 12 ಹಾಗೂ 13ರಂದು ಬೆಲೆಗಳಲ್ಲಿ ಯಾವುದೇ ಬದಲಾವಣೆ ಆಗಿರಲಿಲ್ಲ.

MEDI HOUSE

9TH YEAR ANNIVERSARY






ನಮ್ಮ ಸಂಸ್ಥೆಯು 9 ವರ್ಷಗಳಿಂದ ಸತತವಾಗಿ ಜನರ ಔಷಧ ಮತ್ತು ಔಷಧೇತರ ಸೇವೆಯಲ್ಲಿ ತೊಡಗಿದೆ.
ಈ ಮೈಲಿಗಲ್ಲು ಮುಟ್ಟುವಲ್ಲಿ ಸಹಕರಿಸಿದ ನಮ್ಮ ಎಲ್ಲಾ ಗ್ರಾಹಕರಿಗೆ, ಸಿಬ್ಬಂದಿಗೆ ಹಾಗೂ ಪ್ರೋತ್ಸಾಹಿಸಿದ ಎಲ್ಲಾ ಸ್ನೇಹಿತರು ಹಾಗೂ ಬಂಧು-ಮಿತ್ರರಿಗೆ ಧನ್ಯವಾದಗಳು.

Management and Staff

Corporate Office :

KAVERI MEDIHOUSE (P) LTD.

# 200/1A & 1B,
3rd Floor, 'Raghavendra Plaza', 3rd Main,
7th Cross, P.J. Extension, Davangere.
Customer Care No. : 72040 70922

## ಕಡ್ಡಾಯವಾಗಿ ಮೀಟರ್ ಅಳವಡಿಸಲು ಆಟೋ ಚಾಲಕರಿಗೆ ನಿರ್ದೇಶನ

ದಾವಣಗೆರೆ, ಅ.15 - ನಗರ ಪೊಲೀಸ್ ಉಪಾಧೀಕ್ಷಕ ನಾಗೇಶ್ ಐತಾಳ್, ಆರ್.ಟಿ ಓ. ಶ್ರೀಧರ್, ಸಂಚಾರಿ ಸಿಪಿಐ ತಿಮ್ಮಣ್ಣ ಉಪಸ್ಥಿತಿಯಲ್ಲಿ ನಗರದ ಆಟೋ ರಿಕ್ಷಾ ಚಾಲಕ ಹಾಗೂ ಮಾಲೀಕರ ಸಭೆ ಕರೆದು, ಕಡ್ಡಾಯವಾಗಿ ಆಟೋಗಳಿಗೆ ಮೀಟರ್ ಅಳವಡಿಕೆ ಮಾಡಬೇಕೆಂದು ತಿಳಿಸಲಾಯಿತು.

ಈ ತಿಂಗಳು 30 ರೊಳಗೆ ಎಲ್ಲಾ ಚಾಲಕ/ಮಾಲೀಕರುಗಳು ಆಟೋಗಳಿಗೆ ಕಡ್ಡಾಯವಾಗಿ ಮೀಟರ್ ಅಳವಡಿಸಿಕೊಳ್ಳಬೇಕು. ಇಲ್ಲದಿದ್ದರೆ ಕಠಿಣ ಕಾನೂನು ಕ್ರಮ ಅನಿವಾರ್ಯ ಎಂದು ಡಿವೈಎಸ್ಪಿ ನಾಗೇಶ್ ಐತಾಳ್ ಮತ್ತು ಆರ್.ಟಿ.ಓ ಶ್ರೀಧರ್ ಎಚ್ಚರಿಸಿದರು.

## ಒಣ ಕಸ ವಿಲೇವಾರಿಯಿಂದ ರಸಗೊಬ್ಬರ ತಯಾರಿಕಾ ಘಟಕ ಸ್ಥಾಪನೆ



ದಾವಣಗೆರೆ, ಅ.15- ಒಣ ಕಸ ವಿಲೇವಾರಿಯಲ್ಲಿ ರಾಜ್ಯದಲ್ಲಿಯೇ ದಾವಣಗೆರೆ ನಗರ ಪಾಲಿಕೆ 38ನೇ ವಾರ್ಡಿನ ಎಂ.ಸಿ.ಸಿ. 'ಬಿ' ಬ್ಲಾಕ್ ಮಾದರಿ ಬಡಾವಣೆ ಎಂಬ ಹೆಗ್ಗಳಿಕೆಗೆ ಕಾರಣವಾಗಿದೆ. ಬಡಾವಣೆಯಲ್ಲಿ ಘನ ತ್ಯಾಜ್ಯ ವಿಲೇವಾರಿಯಿಂದ ರಸಗೊಬ್ಬರ ತಯಾರಿಸುವ ಘಟಕವನ್ನು ಸ್ಥಾಪಿಸಿದ್ದಾರೆ. ರಾಜ್ಯ ಸರ್ಕಾರ ದಾವಣಗೆರೆ ಮಹಾನಗರ (5ನೇ ಪುಟಕ್ಕೆ)

## ನಿಷೇಧದ ನಡುವೆಯೂ ಸಂಭ್ರಮದ ಶೋಭಾಯಾತ್ರೆ



ದಾವಣಗೆರೆ, ಅ.14- ವಿಜಯದಶಮಿ ಅಂಗವಾಗಿ ನಗರದಲ್ಲಿ ಸಾರ್ವಜನಿಕ ವಿಜಯ ದಶಮಿ ಉತ್ಸವ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಶೋಭಾಯಾತ್ರೆ ಸಂಭ್ರಮದಿಂದ ನಡೆಯಿತು.

ಬೇತೂರು ರಸ್ತೆಯಲ್ಲಿನ ಶ್ರೀ ವೆಂಕಟೇಶ್ವರ ವೃತ್ತದಲ್ಲಿ ಬೆಳಿಗ್ಗೆ 11.30 ಗಂಟೆಗೆ ಚಾಮುಂಡೇಶ್ವರಿ ಮೂರ್ತಿಗೆ ಜಡೇಶ್ವರ ಶಾಂತಾಶ್ರಮದ ಶ್ರೀ ಶಿವಾನಂದ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಎಸ್.ಎ. ರವೀಂದ್ರನಾಥ ಪೂಜೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಡೊಳ್ಳು ಕುಣಿತ, ನಂದಿಕೋಲು, ಸಮಾಳ, ಗೊಂಬೆಗಳ ಕುಣಿತ, ವಾದ್ಯಗಳು ಸೇರಿದಂತೆ ಕಲಾ ತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಜಿಲ್ಲಾಡಳಿತವು ಡಿ.ಜೆ.ಗೆ ಅನುಮತಿ ನೀಡದೇ ಇದ್ದ ಕಾರಣ ಡೊಳ್ಳಿನ ಸದ್ದಿಗೆ ಯುವಕರು ದಣಿ ವರಿಯದೆ ಕುಣಿದರು. ಪ್ರಮುಖ ವೃತ್ತಗಳಲ್ಲಿ ಯುವಕರು ಯಾತ್ರೆಯಲ್ಲಿ ಆಗಮಿ ಸುತ್ತಿದ್ದ ಜನರಿಗೆ ದಾಹ ತಣಿಸಲು ಶರಬತ್ತು, ಮಜ್ಜಿಗೆ, ನೀರು ವಿತರಿಸಲಾಗುತ್ತಿತ್ತು.

ಭಗತ್‌ಸಿಂಗ್, ಸಾರ್ವಕರ್, ಅಂಬೇಡ್ಕರ್, ಗೋಳ್ವಾಲ್ಕರ್, ಶ್ರೀರಾಮ, ಕನ್ನಿಕಾಪರಮೇಶ್ವರಿ, ದುರ್ಗಾಂಬಿಕೆ, ಆಂಜನೇಯ ಸೇರಿದಂತೆ ವಿವಿಧ ದೇವರ ಭಾವಚಿತ್ರ ಇರುವ ಸ್ತಬ್ಧಚಿತ್ರಗಳು ಮೆರವಣಿಗೆಯಲ್ಲಿದ್ದವು. ಜನರು (2ನೇ ಪುಟಕ್ಕೆ)

# ಹರಿಹರ : ಗಣ್ಯರ ಸಮ್ಮುಖದಲ್ಲಿ ದಸರಾ ಸಡಗರ-ಸಂಭ್ರಮದ ದಸರಾ

ಹರಿಹರ, ಅ.15- ನಗರದಲ್ಲಿ ದಸರಾ ಮಹೋತ್ಸವವನ್ನು ಶ್ರದ್ಧಾ, ಭಕ್ತಿ ಹಾಗೂ ಸಂಭ್ರಮದಿಂದ ಬನ್ನಿ ಮುಡಿಯುವ ಮೂಲಕ ಆಚರಿಸಲಾಯಿತು.

ಭಕ್ತರು ಮನೆಯಲ್ಲಿ ಆದಿಶಕ್ತಿಗೆ ನಮಿಸಿ, ನಂತರ ದೇವಸ್ಥಾನಗಳಿಗೆ ತೆರಳಿ ದೇವಿ ದರ್ಶನ ಪಡೆಯುವ ಮೂಲಕ ಹಬ್ಬದಲ್ಲಿ ಸಂಭ್ರಮಿಸಿದರು.

ದಸರಾ ಮಹೋತ್ಸವ ಸಮಿತಿಯ ವತಿಯಿಂದ ಶ್ರೀ ಕ್ಷೇತ್ರಪಾಲಕ ಹರಿಹರೇಶ್ವರ ಸ್ವಾಮಿ ದೇವಸ್ಥಾನದ ಆವರಣದಿಂದ ಹರಿಹರೇಶ್ವರ ಸ್ವಾಮಿ, ದುರ್ಗಾ ಮಾತೆ ಮತ್ತು ಗ್ರಾಮದೇವತೆಗೆ ಪೂಜೆ ಸಲ್ಲಿಸಲಾಯಿತು.

ಗಜರಾಜನ ಮೇಲಿದ್ದ ದುರ್ಗಾ ದೇವಿಗೆ ಸಂಸದ ಜಿ.ಎಂ. ಸಿದ್ದೇಶ್ವರ, ನಗರಸಭೆ ಅಧ್ಯಕ್ಷರಾದ ರತ್ನಾ ಡಿ. ಉಜ್ಜೇಶ್, ಮಾಜಿ. ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿ.ಜೆ.ಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕಾಂಗ್ರೆಸ್ ಮುಖಂಡರಾದ ನಾಗೇಂದ್ರಪ್ಪ, ರೇವಣಸಿದ್ದಪ್ಪ, ಎನ್. ಹೆಚ್. ಶ್ರೀನಿವಾಸ್, ಡಾ. ಶೈಲೇಶ್ ಕುಮಾರ್ ದಸರಾ ಸಮಿತಿಯ ಅಧ್ಯಕ್ಷ ಶಂಕರ್ ಖಟಾವ್ಕರ್ ಪುಷ್ಪಾರ್ಚನೆ ಮಾಡಿ ಮೆರವಣಿಗೆಗೆ ಚಾಲನೆ ನೀಡಿದರು.

ಗೊಂಬೆ ಕುಣಿತ, ನಂದಿಕೋಲು, ಸಮಾಳ, ಬ್ಯಾಂಡ್ ಸೆಟ್, ಡೊಳ್ಳು, ಹಲಗೆ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ನಡೆದ ಮೆರವಣಿಗೆಯು, ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ, ಗಾಂಧಿ ವೃತ್ತ, ಹಳೆ ಪಿ.ಬಿ. ರಸ್ತೆಯ ಮೂಲಕ ಸಂಚರಿಸಿ ತುಂಗಭದ್ರಾ ನದಿಯ ದಂಡೆ ಪಕ್ಕದ ಜೋಡು ಬಸವೇಶ್ವರ ದೇವಸ್ಥಾನಕ್ಕೆ ಬಂದು ತಲುಪಿತು.

ಸಂಜೆ ಶ್ರೀ ಪಂಡಿತ ನಾರಾಯಣ ಮತ್ತು ಚಿದಂಬರ ಜೋಯಿಸರ ನೇತೃತ್ವದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರು ಇತರೆ ಮುಖಂಡರೊಂದಿಗೆ ಬನ್ನಿ ಮರಕ್ಕೆ ಹಾಗೂ ಶ್ರೀ ಹರಿಹರೇಶ್ವರ ಸ್ವಾಮಿ ಮತ್ತು ಗ್ರಾಮದೇವತೆಗೆ ಪೂಜೆ ಸಲ್ಲಿಸಿ, ಸಾಮೂಹಿಕ ಬನ್ನಿ ಮುಡಿಯುವ ಕಾರ್ಯಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಸದ ಜಿ.ಎಂ. ಸಿದ್ದೇಶ್ವರ, ಕೊರೊನಾ ಮಾರ್ಗಸೂಚಿ ಹಿನ್ನೆಲೆಯಲ್ಲಿ ಹಬ್ಬದ ಸಂಭ್ರಮ ಕ್ಷೀಣಿಸಿದೆಯಾದರೂ, ಭಕ್ತಿಗೆ ಕೊರತೆಯಾಗಿಲ್ಲ ಎಂದರು.

ದಸರಾ ಉತ್ಸವ ಸಮಿತಿ ಅಧ್ಯಕ್ಷ ಶಂಕರ್ ಖಟಾವ್ಕರ್ ಮಾತನಾಡಿ, ಸರ್ಕಾರದ ಮಾರ್ಗಸೂಚಿ ಹಿನ್ನೆಲೆಯಲ್ಲಿ ಈ ಬಾರಿ ನಾಮದೇವ ಕಲ್ಯಾಣ ಮಂಟಪದಲ್ಲಿ 9 ದಿನಗಳ ಕಾಲ ಹಬ್ಬದ ಕಾರ್ಯಕ್ರಮಗಳನ್ನು ನಡೆಸಲಾಯಿತು. ಮೆರವಣಿಗೆಯನ್ನೂ ಸರಳವಾಗಿ ನಡೆಸಲಾಯಿತು ಎಂದರು.

ಮಾಜಿ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಮುಂದಿನ ದಿನಗಳಲ್ಲಿ ಕೊರೊನಾ ರೋಗ ದೇಶದಿಂದ ತೊಲಗಿ ಮತ್ತೆ ಅದ್ದೂರಿಯಾಗಿ ದಸರಾ ಆಚರಣೆ ಮಾಡುವ ಕಾಲ ಬರುತ್ತದೆ ಎಂದು ಹೇಳಿದರು.

ಜಿಲ್ಲಾ ಬಿ.ಜೆ.ಪಿ ಅಧ್ಯಕ್ಷ ವೀರೇಶ್, ಪೌರಾಯುಕ್ತೆ ಎಸ್ ಲಕ್ಷ್ಮಿ, ಸಾದು ವೀರಶೈವ ಸಮಾಜದ ಅಧ್ಯಕ್ಷ ಅಮರಾವತಿ ಮಹಾದೇವಪ್ಪ ಗೌಡ್ರು, ಟಿ.ಜೆ. ಮುರುಗೇಶಪ್ಪ, ಎನ್. ಹೆಚ್. ಶ್ರೀನಿವಾಸ್ ನಂದಿಗಾವಿ, ಎಂ. ನಾಗೇಂದ್ರಪ್ಪ, ಬಿ. ರೇವಣಸಿದ್ದಪ್ಪ, ಡಾ. ಶೈಲೇಶ್ ಕುಮಾರ್, ಚಂದ್ರಶೇಖರ್, ಶಿವಪ್ರಕಾಶ್ ಶಾಸ್ತ್ರಿ, ಅಮರಾವತಿ ರೇವಣಸಿದ್ದಪ್ಪ, ಕರಿಬಸಪ್ಪ ಕಂಚಿಕೇರಿ, ಶಿವಪ್ರಕಾಶ್ ಶೆಟ್ಟಿ, ನಾಗೇಂದ್ರಪ್ಪ ಗಂಗನಹರಸಿ, ಅಜಿತ್ ಸಾವಂತ್, ಮಾಲತೇಶ್ ಭಂಡಾರಿ, ಸಿ.ಎನ್. ಹುಲಗೇಶ್, ಕೆ.ಬಿ. ರಾಜಶೇಖರ್, ರಾಜು ಕೀರೋಜಿ, ನಾಗಮಣಿ ಶಾಸ್ತ್ರಿ, ನಗರಸಭೆ ಸದಸ್ಯರಾದ ಎ. ವಾಮನಮೂರ್ತಿ, ಕೆ.ಜಿ. ಸಿದ್ದೇಶ್, ಪಿ.ಎನ್. ವೀರೂಪಾಕ್ಷ, ಎಸ್.ಎಂ. ವಸಂತ್, ನಿಂಬಕ್ಕ ಚಂದಾಪೂರ್, ಗುತ್ತೂರು ಜಂಬಣ್ಣ, ದೂಡಾ ಸದಸ್ಯ ಬಾತಿ ಚಂದ್ರಶೇಖರ್, ರಾಘವೇಂದ್ರ, ಹನುಮಂತ ರಡ್ಡಿ, ಗೌಡ್ರು ಲಿಂಗರಾಜ್ ಪಾಟೀಲ್, ಬಸವರಾಜಪ್ಪ ಕಂಚಿಕೇರಿ, ಹೆಚ್.ಕೆ. ಕೊಟ್ರಪ್ಪ, ಹೆಚ್. ನಿಜಗುಣ, ಹಲಸಬಾಳು ಬಸವರಾಜಪ್ಪ ತುಳಜಪ್ಪ ಭೂತೆ, ಪರಶರಾಮ ಕಾಟ್ವೆ ಇತರರು ಹಾಜರಿದ್ದರು.

ಸಿಪಿಐ ಸತೀಶ್ ಕುಮಾರ್, ಪಿಎಸ್ಐ ಸುನಿಲ್ ಬಸವರಾಜ್, ವೀರಬಸಪ್ಪ ಕುಸಲಾಪುರ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.

ಜಿಲ್ಲಾಡಳಿತ ಸರಳ ದಸರಾ ಆಚರಣೆಗೆ ಮಾತ್ರ ಅನುಮತಿ ನೀಡಿತ್ತು. ಆದರೆ, ಮೆರವಣಿಗೆಯಲ್ಲಿ ಕಳೆದ ವರ್ಷದಂತೆಯೇ ಸಹಸ್ರ ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು.

# ಗ್ರಾಮ ವಾಸ್ತವ್ಯಕ್ಕೆ ಇಂದು ಮುಖ್ಯಮಂತ್ರಿ ಚಾಲನೆ

## ಹೊನ್ನಾಳಿ-ನ್ಯಾಮತಿಯಲ್ಲಿ ದಾಖಲೆಯ ಗ್ರಾಮ ವಾಸ್ತವ್ಯ : ರೇಣುಕಾಚಾರ್ಯ



ಹೊನ್ನಾಳಿ, ಅ.15-ಮುಖ್ಯಮಂತ್ರಿಗಳ ಗ್ರಾಮ ವಾಸ್ತವ್ಯದ ಹಿನ್ನೆಲೆಯಲ್ಲಿ ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ಹಾಗೂ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಅವರು ಪೂರ್ವ ಸಿದ್ಧತೆಗೆ ಸಂಬಂಧಿಸಿದಂತೆ ಕುಂದೂರು ಹಾಗೂ ಸುರಹೊನ್ನೆ ಗ್ರಾಮಗಳಿಗೆ ಇಂದು ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೇಣುಕಾಚಾರ್ಯ, ಕೋವಿಡ್ ಕಾರಣದಿಂದ ಸ್ಥಗಿತಗೊಂಡಿದ್ದ ಗ್ರಾಮ ವಾಸ್ತವ್ಯಕ್ಕೆ ಮುಖ್ಯಮಂತ್ರಿಗಳು ಚಾಲನೆ ನೀಡಲಿದ್ದಾರೆ. ಕಂದಾಯ ಸಚಿವರು ಈಗಾಗಲೇ ಎರಡು ಕಡೆ ಗ್ರಾಮ ವಾಸ್ತವ್ಯ ಮಾಡಿದ್ದು, ಕೋವಿಡ್ ನಂತರ ಇದೇ ಮೊದಲ ಬಾರಿಗೆ ಹೊನ್ನಾಳಿ ತಾಲ್ಲೂಕಿನ ಕುಂದೂರು ಗ್ರಾಮದಲ್ಲಿ ವಾಸ್ತವ್ಯ ಮಾಡಲಿದ್ದಾರೆ. ಈ ಕಾರ್ಯ ಕ್ರಮ ಹಿಂದೆ ನಡೆದ ಗ್ರಾಮ ವಾಸ್ತವ್ಯಗಳಿಗಿಂತ ವೈವಿಧ್ಯ ಹಾಗೂ ವಿಶಿಷ್ಟವಾಗಿರಲಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ಮುಖ್ಯಮಂತ್ರಿಗಳು ಹಾಗೂ ಸಚಿವರನ್ನು ವಿಶೇಷ ಅಲಂಕೃತ ಚಕ್ಕಡಿಗಳಲ್ಲಿ ಸ್ಥಳೀಯ ಜಾನಪದ ಕಲಾವಿದರು ಹಾಗೂ ವಿವಿಧ ಕಲಾತಂಡಗಳೊಂದಿಗೆ ಆನೆ ಮೆರವಣಿಗೆಯೊಂದಿಗೆ ಸ್ವಾಗತಿಸಲಾಗುವುದು ಎಂದು ತಿಳಿಸಿದರು.

ನಾಳೆ ದಿನಾಂಕ 16 ರ ಶನಿವಾರ ಬೆಳಿಗ್ಗೆ 10 ಗಂಟೆಗೆ ಕಂದಾಯ ಸಚಿವರು ಮಲ್ಲಿಕಾರ್ಜುನ ದೇವಾಲಯದಿಂದ ವಿಶೇಷ ಅಲಂಕೃತ ಎತ್ತಿನ ಬಂಡಿಯ ಮೂಲಕ ಕಾರ್ಯಕ್ರಮಕ್ಕೆ ಆಗಮಿಸಲಿದ್ದಾರೆ. ಮುಖ್ಯಮಂತ್ರಿಗಳು ಬೆಳಿಗ್ಗೆ 11 ಗಂಟೆ ಸುಮಾರಿಗೆ ಹೊನ್ನಾಳಿ ಹೆಲಿಪ್ಯಾಡ್‌ಗೆ ಬಂದು ಅಲ್ಲಿಂದ ಸುರಹೊನ್ನೆ ಗ್ರಾಮದಲ್ಲಿ ಏರ್ಪಡಿಸಿರುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಂತರ ಸರ್ಕಾರದ ವಿವಿಧ ಕಾರ್ಯಕ್ರಮಗಳು ಹಾಗೂ ವಿವಿಧ ಫಲಾನುಭವಿಗಳಿಗೆ ಸವಲತ್ತು ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ವಿವಿಧ ಇಲಾಖೆಗಳಿಂದ ಏರ್ಪಡಿಸಿರುವ ಮಾಹಿತಿ ಮಳಿಗೆಗಳನ್ನು ಉದ್ಘಾಟಿಸುವರು. 27 ಗಣರಾಜ್ಯ ಘಟಕಗಳ ಆಟೋಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಲಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರಪ್ಪ, ಸಂಸದ ಜಿ.ಎಂ.ಸಿದ್ದೇಶ್ವರ ಸೇರಿದಂತೆ ಎಲ್ಲಾ ಶಾಸಕರು ಪಾಲ್ಗೊಳ್ಳುವರು. ನಂತರ ಕುಂದೂರು ಗ್ರಾಮದ ಆಂಜನೇಯ ದೇವಾಲಯಕ್ಕೆ ಭೇಟಿ ನೀಡಿ, ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು. ಅಂದು ರಾತ್ರಿ ಕಂದಾಯ ಸಚಿವರು ಅಲ್ಲೇ ವಾಸ್ತವ್ಯ ಮಾಡಲಿದ್ದು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಾಳೆ ಭಾನುವಾರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮುಂದುವರೆಸುತ್ತಿದ್ದು, ಅಂದು ಗಾಯಕ ಚಂದನ್ ಶೆಟ್ಟಿ ಅವರನ್ನು ಕರೆಸಲಾಗುವುದು ಎಂದು ರೇಣುಕಾಚಾರ್ಯ ತಿಳಿಸಿದ್ದಾರೆ.

ನಾಳೆ ಭಾನುವಾರ ಬೆಳಿಗ್ಗೆ ಕಂದಾಯ ಸಚಿವ ಆರ್. ಅಶೋಕ್ ಅವರು ಹರಿಜನ ಕಾಲೋನಿಗೆ ಭೇಟಿ ನೀಡಿ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿ ಉಪಹಾರ ಸೇವಿಸುವರು ಅವರು ವಿವರಿಸಿದ್ದಾರೆ.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ತಹಶೀಲ್ದಾರ್ ಬಸವನಗೌಡ ಕೋಟೂರ, ಬಿಜೆಪಿ ಅಧ್ಯಕ್ಷ ಸುರೇಶ್, ಬಿಜೆಪಿ ಮುಖಂಡರಾದ ದೊಡ್ಡೇರಿ ರಾಜಣ್ಣ, ಎಂಆರ್ ಮಹೇಶ್, ಶಾಂತರಾಜ್, ಹಳದಪ್ಪ, ಕುಬೇರಪ್ಪ ಇತರರು ಈ ಸಂದರ್ಭದಲ್ಲಿದ್ದರು.

## ಜಿಲ್ಲೆಗೆ ಇಂದು ಮುಖ್ಯಮಂತ್ರಿ


**(1ನೇ ಪುಟದಿಂದ)** ಗ್ರಾಮದಲ್ಲಿನ ಕಸ್ತೂರಬಾ ವಸತಿ ಶಾಲೆಯಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ' ಮತ್ತು ಗ್ರಾಮ ವಾಸ್ತವ್ಯಕ್ಕೆ ಚಾಲನೆ ನೀಡುವರು. ಅಲ್ಲದೆ, ಸಾಮಾಜಿಕ ಭದ್ರತೆ ಹಾಗು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಫಲಾನುಭವಿಗಳಿಗೆ ವಿತರಿಸಿ, ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಿದ್ದಾರೆ.



**ಜಿಗಳಿಯಲ್ಲಿ ಬನ್ನಿ ವಿನಿಮಯ**

ಜಿಗಳಿ ಗ್ರಾಮದಲ್ಲಿ ವಿಜಯದಶಮಿ ಹಬ್ಬದ ಅಂಗವಾಗಿ ಬನ್ನಿಕಟ್ಟೆಯಲ್ಲಿ ಗ್ರಾಮದ ಶ್ರೀ ರಂಗನಾಥಸ್ವಾಮಿ, ಶ್ರೀ ಬೀರಲಿಂಗೇಶ್ವರ ಮತ್ತು ಜಿ.ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಸಮ್ಮುಖದಲ್ಲಿ ಗ್ರಾಮಸ್ಥರು ಸಂಭ್ರಮದಿಂದ ಸಾಮೂಹಿಕವಾಗಿ ಬನ್ನಿ ಮುಡಿದು, ಬನ್ನಿ ವಿನಿಮಯ ಮಾಡಿಕೊಂಡರು.

## ಸಂಭ್ರಮದ ಶೋಭಾಯಾತ್ರೆ



**(1ನೇ ಪುಟದಿಂದ)** ಕಟ್ಟಡಗಳ ಮೇಲೇರಿ ಮೆರವಣಿಗೆ ವೀಕ್ಷಿಸುತ್ತಿದ್ದರು. ದಾರಿಯುದ್ದಕ್ಕೂ ಕೇಸರಿ ಬಾವುಟಗಳನ್ನು ಕಟ್ಟಲಾಗಿತ್ತು.

ಶೋಭಾಯಾತ್ರೆಯು ವೆಂಕಟೇಶ್ವರ ವೃತ್ತದಿಂದ ಆರಂಭವಾಗಿ ಬಂಬೂಬಜಾರ್ ರಸ್ತೆ, ಹಾಸಬಾವಿ ಸರ್ಕಲ್, ಚೌಕಿಪೇಟೆ ರಸ್ತೆ, ಚಾಮರಾಜ್ ಪೇಟೆ, ವಿಜಯಲಕ್ಷ್ಮಿ ರಸ್ತೆ, ಹಗೇದಿಬ್ಬ ಸರ್ಕಲ್, ದುರ್ಗಾಂಬಿಕಾ ದೇವಸ್ಥಾನ ರಸ್ತೆ, ಹೊಂಡದ ವೃತ್ತ, ಅರುಣಾ ಟಾಕೀಸ್ ರಸ್ತೆಯ ಮೂಲಕ ಪಿಬಿ ರಸ್ತೆ ಸೇರಿ ಶ್ರೀ ಬೀರಲಿಂಗೇಶ್ವರ ಆವರಣ ತಲುಪಿತು.

ಮೇಯರ್ ಎಸ್.ಟಿ.ವೀರೇಶ್, ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್, ಯಶವಂತರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ಸಾರ್ವಜನಿಕ ವಿಜಯದಶಮಿ ಸಮಿತಿಯ ಕೆ.ಬಿ.ಶಂಕರನಾರಾಯಣ, ವೈ. ಮಲ್ಲೇಶ್, ಸತೀಶ್ ಪೂಜಾರಿ, ಎನ್.ರಾಜಶೇಖರ್, ಪಾಲಿಕೆ ಸದಸ್ಯರಾದ ಕೆ.ಎಂ. ವೀರೇಶ್, ಆರ್.ಎಲ್.ಶಿವಪ್ರಕಾಶ್, ಶಿವನಗೌಡ ಪಾಟೀಲ್, ಬಿಜೆಪಿ ಮುಖಂಡರಾದ ಶ್ರೀನಿವಾಸ್ ದಾಸಕರಿಯಪ್ಪ, ಪಿ.ಸಿ. ಶ್ರೀನಿವಾಸ್, ಸಂಘಟನೆಗಳ ಮುಖಂಡರಾದ ಜೊಲ್ಲೆ ಗುರು ಮತ್ತಿತರರು ಭಾಗವಹಿಸಿದ್ದರು. ಮುಖಂಡರುಗಳು ಕೇಸರಿ ಶಾಲು, ಕೇಸರಿ ಪೇಟ ತೊಟ್ಟು ಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ವೆಂಕಟೇಶ್ವರ ವೃತ್ತದಲ್ಲಿ ಶೋಭಾಯಾತ್ರೆಗೆ ಚಾಲನೆ ನೀಡುವ ವೇಳೆ ಮುಸ್ಲಿಂ ಮುಖಂಡರು ಆಗಮಿಸಿ ಶುಭಾಶಯ ಕೋರಿದರು.

**ನಿಷೇಧದ ನಡುವೆಯೂ ನಡೆದ ಮೆರವಣಿಗೆ:** ಕೋವಿಡ್ ಮಾರ್ಗಸೂಚಿ ಹಿನ್ನೆಲೆಯಲ್ಲಿ ಯಾವುದೇ ಮೆರವಣಿಗೆಗಳನ್ನು ನಡೆಸುವಂತಿಲ್ಲ ಎಂದು ಜಿಲ್ಲಾಡಳಿತ ಸೂಚಿಸಿತ್ತು. ಆದಾಗ್ಯೂ ಮೆರವಣಿಗೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು ಪಾಲ್ಗೊಂಡಿದ್ದರು. ಶೋಭಾಯಾತ್ರೆ ಬಿಗಿ ಪೊಲೀಸ್ ಬಂದೋ ಬಸ್ತ್ ನಡುವೆಯೇ ಜರುಗಿತು. ಅತಿ ಸೂಕ್ಷ್ಮ ಪ್ರದೇಶದಲ್ಲಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು.

## ಅಂತರಂಗದ ಕೆಡುಕ ಕೊಂದರೆ ಅರ್ಥಪೂರ್ಣ



**(1ನೇ ಪುಟದಿಂದ)** ವಿವಿಯಂತೆ ಇರುವ ಆರ್‌ಎಸ್‌ಎಸ್ ಅನ್ನು ಕೆಲವು ರಾಜಕಾರಣಿಗಳು ಈಗಲೂ ಟೀಕಿಸುತ್ತಿರುವುದು ವಿಷಾದಕರ ಎಂದು ಹೇಳಿದರು.

ಸ್ನೇಹಿತರ ದಿನ, ಪ್ರೇಮಿಗಳ ದಿನದ ಹೆಸರಿನಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನು ಹಾದಿ ತಪ್ಪಿಸುವ ಕೆಲಸವಾಗುತ್ತಿದೆ. ಲವ್ ಜಿಹಾದ್ ಹೆಸರಿನಲ್ಲಿ ಹಿಂದೂ ಯುವತಿಯರ ಮತಾಂತರ ಮಾಡಲಾಗುತ್ತಿದೆ. ಲವ್ ಜಿಹಾದ್, ಗೋಹತ್ಯೆ ಹಾಗೂ ಮತಾಂತರಗಳ ಬಗ್ಗೆ ಸಮಗ್ರ ತನಿಖೆ ನಡೆಯಬೇಕು ಎಂದು ಆಗ್ರಹಿಸಿದರು.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಸಂಸ್ಕೃತಿ, ಸಂಸ್ಕಾರ ಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಮಠ - ಮಂದಿರಗಳು ರಾಜಾಶ್ರಯದಲ್ಲಿ ನವ ದುರ್ಗೆಯನ್ನು ಆರಾಧಿಸುತ್ತಿವೆ. ದೇಶದ ಸಂಸ್ಕೃತಿ ಉಳಿಸಿ ಬೆಳೆಸುವ ಗುರುತರ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು. ಸಾರ್ವಜನಿಕ ವಿಜಯದಶಮಿ ಮಹೋತ್ಸವದ ಸಂಚಾಲಕ ಸತೀಶ್ ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪೌರ ಕಾರ್ಮಿಕರ ಮುಖಂಡರಾದ ನೀಲಗಿರಿಯಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮೇಯರ್ ಎಸ್.ಟಿ. ವೀರೇಶ್ ಸ್ವಾಗತಿಸಿದರು. ರೇಖ ಪದಕಿ ಪ್ರಾರ್ಥಿಸಿದರು.

## ವಿಚಾರಧಾರೆಯ ಮುಕ್ತ ವಿವಿ

**(1ನೇ ಪುಟದಿಂದ) ನಿಷೇಧಿಸಿದ್ದರೂ ಅದು ಬೆಳೆದು ನಿಂತಿದೆ ಎಂದು ಹಿಂದೂ ಜಾಗರಣಾ ವೇದಿಕೆಯ ಮಾತೃ ಸುರಕ್ಷಾ ರಾಜ್ಯ ಸಂಚಾಲಕ ಶಿವಾನಂದ ಬಡಿಗೇರ್ ಹೇಳಿದ್ದಾರೆ. ಸರಸ್ವತಿ ಪೂಜೆ ಮಾಡಿದರೆ ಕೇಸರೀಕರಣ ಎಂದು ಬಿಂಬಿಸಲಾಗುತ್ತಿದೆ. 2025ರ ವೇಳೆಗೆ ಇಡೀ ಜಗತ್ತನ್ನು ಕೇಸರೀಕರಣ ಮಾಡುತ್ತೇವೆ. ಸನಾತನ ಧರ್ಮದಿಂದ ಜಗತ್ತನ್ನು ಆಳಬಹುದು ಎಂದವರು ತಿಳಿಸಿದ್ದಾರೆ.**

## ಗಾಳಿಗೆ ತೂರಿದರೆ ಕ್ರಮ : ಡಿಸಿ

**(1ನೇ ಪುಟದಿಂದ) ಎಫ್.ಐ.ಆರ್. ಮಾಡಿದ್ದೇವೆ. ಬೇರೆಡೆಯೂ ಸಹ ಇದೇ ರೀತಿ ಘಟನೆ ನಡೆದಾಗ ಕ್ರಮ ತೆಗೆದುಕೊಂಡಿದ್ದೇವೆ. ಕಾನೂನು ಕೈಗೆತ್ತಿಕೊಂಡರೆ ಕ್ರಮ ಕಟ್ಟಿಟ್ಟ ಬುತ್ತಿ. ಕಾನೂನು ಎಲ್ಲರಿಗೂ ಸಮಾನ, ಎಲ್ಲರನ್ನೂ ಒಂದೇ ತಕ್ಕಡಿಯಲ್ಲಿ ನಾವು ತೂಗುತ್ತೇವೆ ಎಂದವರು ತಿಳಿಸಿದ್ದಾರೆ.**

## ಬೈಕ್‌ಗಳ ನಡುವೆ ಮುಖಾ-ಮುಖಿ ಡಿಕ್ಕಿ: ಸವಾರ ಸ್ಥಳದಲ್ಲೇ ಸಾವು

ದಾವಣಗೆರೆ, ಅ.15- ಬೈಕ್ ಗಳ ನಡುವೆ ಮುಖಾ-ಮುಖಿ ಡಿಕ್ಕಿ ಸಂಭಸಿದ ಪರಿಣಾಮ ಸ್ಥಳ ದಲ್ಲೇ ಸವಾರನೋರ್ವ ಮೃತಪಟ್ಟಿರುವ ಘಟನೆ ಚನ್ನಗಿರಿ ತಾಲ್ಲೂಕು ರಾಜಗೊಂಡನಹಳ್ಳಿ ಬಳಿ ನಡೆದಿದೆ.

ಬಸವರಾಜಪ್ಪ (50) ಮೃತ ದುರ್ದೈವಿ. ಮೃತ ವ್ಯಕ್ತಿ ಬಸವರಾಜಪ್ಪ ತನ್ನ ಮಗಳನ್ನು ಕರೆದುಕೊಂಡು ಬೈಕ್‌ನಲ್ಲಿ ಚನ್ನಗಿರಿ ತಾಲ್ಲೂಕಿನ ದಿಗ್ಗೇನಹಳ್ಳಿ ಗ್ರಾಮದಿಂದ ಪಾಂಡೋಮಟ್ಟಿ ಗ್ರಾಮಕ್ಕೆ ಹೋಗುವ ಸಂದರ್ಭದಲ್ಲಿ ರಾಜಗೊಂಡನಹಳ್ಳಿ ಬಳಿ ಎದುರಿನಿಂದ ವೇಗವಾಗಿ ಬರುತ್ತಿದ್ದ ಬೈಕ್ ಸವಾರನ ನಿಯಂತ್ರಣ ತಪ್ಪಿ ಬಸವರಾಜಪ್ಪರ ಬೈಕಿಗೆ ಡಿಕ್ಕಿ ಪಡಿಸಿದೆ. ಪರಿಣಾಮ ಬಸವರಾಜಪ್ಪ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಹಿಂಬದಿಯಲ್ಲಿ ಕುಳಿತಿದ್ದ 22 ವರ್ಷದ ಮಗಳು ಅನುಷಾ ಗಂಭೀರವಾಗಿ ಗಾಯಗೊಂಡಿದ್ದು, ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ಸಂಬಂಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಐತಿಹಾಸಿಕ ಚಿತ್ರದುರ್ಗದಲ್ಲಿ ಶರಣ ಸಂಸ್ಕೃತಿ ಉತ್ಸವ



**(1ನೇ ಪುಟದಿಂದ)** ಬಿ. ಮೂಲಕ ಹಾಕಿ ಭಕ್ತಿ ಸಮರ್ಪಿಸಿದರು.

ಶ್ರೀಗಳ ವಾಹನ ಗಾಂಧಿ ವೃತ್ತದ ಬಳಿ ಬಂದಾಗ ಹೆಲಿಕ್ಯಾಪ್ಟರ್‌ನಿಂದ ಪುಷ್ಪವೃಷ್ಟಿಯ ಮೂಲಕ ಶ್ರೀಗಳಿಗೆ ಗೌರವ ಸಲ್ಲಿಸಲಾಯಿತು. ನೆರೆದಿದ್ದ ಜನರು ಈ ಸನ್ನಿವೇಶವನ್ನು ಕಂಡು ಜೈಕಾರ ಹಾಕುತ್ತ ಸಂಭ್ರಮಿಸಿದರು.

ಮೇಳದಲ್ಲಿ ಶ್ರೀ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹರ ಗುರು ಚರ ಮೂರ್ತಿಗಳು, ಶಾಸಕ ಜಿ. ಹೆಚ್. ತಿಪ್ಪಾರೆಡ್ಡಿ, ಶರಣ ಸಂಸ್ಕೃತಿ ಉತ್ಸವ 2021ರ ಕಾರ್ಯಾಧ್ಯಕ್ಷರಾದ ಕೆ.ಎಸ್.ನವೀನ್, ಪಟೇಲ್ ಶಿವಕುಮಾರ್, ಶಂಕರಮೂರ್ತಿ, ಎಸ್.ಜೆ.ಎಂ.ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ ಮುಂತಾದ ಗಣ್ಯರು ಭಾಗವಹಿಸಿ ಉತ್ಸವಕ್ಕೆ ಮೆರಗು ತಂದರು.




ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 15.10.2021ರಂದು ನಿಧನರಾದ
ನಮ್ಮ ಬ್ಯಾಂಕ್‌ನ ನಿವೃತ್ತ ಶಾಖಾ ವ್ಯವಸ್ಥಾಪಕರಾಗಿದ್ದ

**ಶ್ರೀ ಡಿ.ಇ. ಶಿವಶಂಕರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ
ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ
ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಶ್ರೀ ಕೋಗುಂಡಿ ಬಕ್ಕೇಶಪ್ಪ, ಅಧ್ಯಕ್ಷರು — ಶ್ರೀ ಅಂದನೂರು ಮುಪ್ಪಣ್ಣ, ಉಪಾಧ್ಯಕ್ಷರು

ನಿರ್ದೇಶಕರುಗಳು :
✦ ಶ್ರೀ ಬಿ.ಸಿ. ಉಮಾಪತಿ ✦ ಶ್ರೀ ಮತ್ತಿಹಳ್ಳಿ ವೀರಣ್ಣ ✦ ಶ್ರೀ ಪಲ್ಲಾಗಟ್ಟಿ ಶಿವಾನಂದಪ್ಪ ✦ ಶ್ರೀ ಎಂ. ಚಂದ್ರಶೇಖರ್
✦ ಶ್ರೀ ಟಿ.ಎಸ್. ಜಯರುದ್ರೇಶ್, ವ್ಯವಸ್ಥಾಪನಾ ಮಂಡಳಿ ಅಧ್ಯಕ್ಷರು ✦ ಶ್ರೀ ದೇವರಮನೆ ಶಿವಕುಮಾರ್, ವ್ಯವಸ್ಥಾಪನಾ ಮಂಡಳಿ ಸದಸ್ಯರು
✦ ಶ್ರೀ ಅಜ್ಜಂಪುರ ಶೆಟ್ರು ವಿಜಯಕುಮಾರ್ ✦ ಶ್ರೀಮತಿ ಸುರೇಖಾ ಎಂ. ಚಿಗಟೇರಿ ✦ ಶ್ರೀ ಕಂಚಿಕೇರಿ ಮಹೇಶ್, ವ್ಯವಸ್ಥಾಪನಾ ಮಂಡಳಿ ಸದಸ್ಯರು
✦ ಶ್ರೀ ನಲ್ಲೂರು ಎಸ್. ರಾಘವೇಂದ್ರ ✦ ಶ್ರೀ ಇ.ಎಂ. ಮಂಜುನಾಥ ✦ ಶ್ರೀ ವಿ. ವಿಕ್ರಮ್

ವೃತ್ತಿಪರ ನಿರ್ದೇಶಕರು :
✦ ಶ್ರೀ ಮುಂಡಾಸ್ ವೀರೇಂದ್ರ, ಚಾರ್ಟರ್ಡ್ ಅಕೌಂಟೆಂಟ್ ✦ ಶ್ರೀ ಮಲ್ಲಿಕಾರ್ಜುನ ಕಣವಿ, ವಕೀಲರು

ವಿಶೇಷ ಆಹ್ವಾನಿತರು :
✦ ಶ್ರೀ ಬೆಳ್ಳೂಡಿ ಮಂಜುನಾಥ್ ✦ ಶ್ರೀ ಎಂ. ದೊಡ್ಡಪ್ಪ

ವ್ಯವಸ್ಥಾಪನಾ ಮಂಡಳಿ ಸದಸ್ಯರು :
✦ ಶ್ರೀ ಬೆಳಗಾವಿ ಬಸವರಾಜಪ್ಪ ✦ ಶ್ರೀ ಜಂಬಗಿ ರಾಧೇಶ್ ✦ ಶ್ರೀ ಕೆ. ಕೊಟ್ರೇಶ್

ಶ್ರೀ ಬಿ.ಎಸ್. ಮಲ್ಲೇಶ್, ಉಪ ಪ್ರಧಾನ ವ್ಯವಸ್ಥಾಪಕರು — ಶ್ರೀ ಡಿ.ವಿ. ಆರಾಧ್ಯಮಠ್, ಪ್ರಧಾನ ವ್ಯವಸ್ಥಾಪಕರು

ಬ್ಯಾಂಕಿನ ಸಿಬ್ಬಂದಿ ವರ್ಗದವರು ಮತ್ತು ಲಕ್ಷ್ಮಿ ಠೇವಣಿ ಸಂಗ್ರಹಕಾರರು ಹಾಗೂ ನಿವೃತ್ತ ನೌಕರರು

**ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,**
ಪ್ರಧಾನ ಕಚೇರಿ : ಪೋಸ್ಟ್ ಬಾಕ್ಸ್ ನಂ. 217, ಪಿ.ಬಿ. ರಸ್ತೆ, ದಾವಣಗೆರೆ.



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 15.10.2021ರಂದು ನಿಧನರಾದ ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ನಿವೃತ್ತ ಶಾಖಾ ವ್ಯವಸ್ಥಾಪಕರಾಗಿದ್ದ

**ಶ್ರೀ ಡಿ.ಇ. ಶಿವಶಂಕರ್**


ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ನಿವೃತ್ತ ನೌಕರರು, ದಿ ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.**


## ನಗರದಲ್ಲಿ ಇಂದು ಬೆಸ್ಕಾಂ ಗ್ರಾಹಕರ ಸಂವಾದ


ಇಂದು ಮಧ್ಯಾಹ್ನ 3 ರಿಂದ 5.30 ರವರೆಗೆ ಗ್ರಾಹಕರ ಸಂವಾದವು ಹದಡಿ ರಸ್ತೆಯ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿರುವ ಬೆಸ್ಕಾಂ ಉಪವಿಭಾಗ-2 ರ ಕಛೇರಿಯಲ್ಲಿ ನಡೆಯಲಿದೆ.

## ಕೆ. ಎಂ. ಚಂದ್ರಪ್ಪ ನಿಧನ



ದಾವಣಗೆರೆ ವಿದ್ಯಾನಗರ 3ನೇ ಕ್ರಾಸ್ ಈಶ್ವರ ಪಾರ್ವತಿ ದೇವಸ್ಥಾನ ಹಿಂಭಾಗದ ವಾಸಿ, ಡಿ.ಆರ್.ಎಂ ಸೈನ್ಸ್ ಕಾಲೇಜಿನ ನಿವೃತ್ತ ದ್ವಿತೀಯ ದರ್ಜೆ ಸಹಾಯಕರಾದ ಕೆ.ಎಂ. ಚಂದ್ರಪ್ಪ (87) ಇವರು ದಿನಾಂಕ 15.10.2021ರ ಶುಕ್ರವಾರ ಮಧ್ಯಾಹ್ನ 2.10ಕ್ಕೆ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 16.10.2021ರ ಶನಿವಾರ ಮಧ್ಯಾಹ್ನ 12 ಗಂಟೆಗೆ ರಾಮನಗರದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಡಿ.ಇ. ಶಿವಶಂಕರ್ ನಿಧನ



ದಾವಣಗೆರೆ ಕಾಯಿಪೇಟೆ ಹತ್ತಿರದ ಮೈಸೂರು ಮಠದ ಗಲ್ಲಿಯ ವಾಸಿ ದಿ|| ದುರ್ಗದ ಇಟಗಿ ಶಿವಪ್ಪ ಅವರ ಪುತ್ರರೂ ಹಾಗೂ ದಾವಣಗೆರೆ ಅರ್ಬನ್ ಬ್ಯಾಂಕ್‌ನ ನಿವೃತ್ತ ಮ್ಯಾನೇಜರ್ ಆಗಿದ್ದ ಡಿ.ಇ. ಶಿವಶಂಕರ್ (64) ಇವರು ದಿನಾಂಕ 15.10.2021ರ ಶುಕ್ರವಾರ ಬೆಳಿಗ್ಗೆ 11.30ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 16.10.2021ರ ಶನಿವಾರ ಬೆಳಿಗ್ಗೆ 10.30 ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.



**ಶ್ರೀ ಚೌಡೇಶ್ವರಿ ದೇವಿಗೆ ಧನಲಕ್ಷ್ಮಿ ಅಲಂಕಾರ**

ದಾವಣಗೆರೆಯ ದಾವಲ್ ಪೇಟೆಯಲ್ಲಿರುವ ತೊಗಟವೀರ ಸಮಾಜದ ಶ್ರೀ ಚೌಡೇಶ್ವರಿ ದೇವಿಗೆ ಲಕ್ಷ್ಮಿನೋಟಿನ ಅಲಂಕಾರ ಮಾಡಲಾಗಿತ್ತು.

# ಮಾನಸಿಕ ಒತ್ತಡದಿಂದ ದೂರವಿದ್ದು, ಆರೋಗ್ಯಕ್ಕೆ ಗಮನ ಹರಿಸಬೇಕು

ಹರಪನಹಳ್ಳಿ, ಅ.15- ಮಾನಸಿಕ ಒತ್ತಡದಿಂದ ಸಾರ್ವಜನಿಕರು ದೂರವಿದ್ದು ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಹರಿಸಬೇಕು ಎಂದು ಕಿರಿಯ ಸಿವಿಲ್ ನ್ಯಾಯಾಧೀಶರಾದ ಪಕ್ಕೀರವ್ವ ಕೆಳಗೇರಿ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಆರೋಗ್ಯ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಹಾಗೂ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಲಕ್ಷಾಂತರ ಜನರು ಮಾನಸಿಕವಾಗಿ ಕುಗ್ಗುತ್ತಿದ್ದಾರೆ. ಇಂತಹ ರೋಗ ಉಲ್ಬಣದ ಸಮಸ್ಯೆ ಸೃಷ್ಟಿಯಾಗಲು ಮಾನಸಿಕ ಒತ್ತಡ ಕಾರಣ, ಮತ್ತೊಂದು ಕಡೆ ದೇಶದಲ್ಲಿ ಕೊರೊನಾ ಭಯದಿಂದ ಎಷ್ಟೋ ಜನ ತಮ್ಮ ಸಂಬಂಧಗಳನ್ನು ಕಳೆದುಕೊಂಡಿದ್ದಾರೆ. ಇಂತಹ ಭಯ, ಒತ್ತಡ ಬಿಟ್ಟು ಧೈರ್ಯದಿಂದ ಬದುಕಬೇಕು ಎಂದು ಹೇಳಿದರು.




ಹರಪನಹಳ್ಳಿಯ ನ್ಯಾಯಾಧೀಶರಾದ ಪಕ್ಕೀರವ್ವ ಕೆಳಗೇರಿ ಕರೆ

ಅಪರ ಸರ್ಕಾರಿ ವಕೀಲ ವಿ.ಜಿ.ಪ್ರಕಾಶ್ ಗೌಡ ಮಾತನಾಡಿ, ಆಹಾರದಲ್ಲಿ ಏರುಪೇರು ಉಂಟಾದಾಗ ಮಾನಸಿಕವಾಗಿ ಖಿನ್ನತೆಗೆ ಒಳಗಾಗಬಾರದು. ಇನ್ನೊಬ್ಬರ ಬಗ್ಗೆ ಮಾನಸಿಕವಾಗಿ ಮಾತನಾಡುವುದು ಮತ್ತು ವೈಯಕ್ತಿಕವಾಗಿ ನಿಂದಿಸುವುದರಿಂದ ಖಿನ್ನತೆಗೆ ಒಳಗಾಗುವ ಸಾಧ್ಯತೆ ಇದೆ. ಹಾಗಾಗಿ ಮನುಷ್ಯರು ಸಮಾಜದಲ್ಲಿ ಆರೋಗ್ಯಕರ ಜೀವನ ನಡೆಸಬೇಕು ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕು ವೈದ್ಯಾಧಿಕಾರಿ ಡಾ. ದೇವರಾಜ್, ವಕೀಲರುಗಳಾದ ಎಂ.ಮೃತ್ಯುಂಜಯ, ಎಸ್.ಜಿ. ತಿಪ್ಪೇಸ್ವಾಮಿ, ನಂದೀಶ್‌ನಾಯ್ಕ, ಕೆ. ರೇವಣಸಿದ್ದಪ್ಪ, ಬಸವರಾಜ್, ಕೊಟ್ರೇಶ್, ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿಗಳಾದ ಭುವನೇಶ್ವರಿ, ಗೌರಮ್ಮ ಸೇರಿದಂತೆ ಇತರರು ಇದ್ದರು.

## ಎಸ್.ಓ.ಜಿ. ಕಾಲೋನಿಯಲ್ಲಿ ಶ್ರೀ ದೇವಿಗೆ ನಾನಾ ಅಲಂಕಾರ





ಎಸ್.ಓ.ಜಿ ಕಾಲೋನಿಯಲ್ಲಿರುವ ಕರ್ಮ ಫಲದಾತ ಶ್ರೀ ಶನೈಶ್ಚರ ಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿಯ ಎಂಟನೇ ದಿನದಂದು ಶ್ರೀ ಚೌಡೇಶ್ವರಿ ಅಮ್ಮನವರಿಗೆ ನೋಟಿನ ಅಲಂಕಾರ, ಪೂಜಾ ಅಲಂಕಾರ ಹಾಗೂ ಒಂಬತ್ತನೇ ದಿನದಂದು ಅಮ್ಮನವರಿಗೆ 21 ರೇಷ್ಮೆ ಸೀರೆಗಳ ಅಲಂಕಾರ ಮಾಡಲಾಗಿತ್ತು.



ಎಸ್.ಓ.ಜಿ ಕಾಲೋನಿಯಲ್ಲಿರುವ ಕರ್ಮ ಫಲದಾತ ಶ್ರೀ ಶನೈಶ್ಚರ ಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿಯ ಒಂಬತ್ತನೇ ದಿನದಂದು ಶ್ರೀ ಕೊಪ್ಪದಾಂಬ ಅಮ್ಮನವರಿಗೆ 9 ರೇಷ್ಮೆಯ ಸೀರೆಗಳ ಅಲಂಕಾರ ಮಾಡಲಾಗಿತ್ತು.

## ಮಹಿಷಮರ್ಧಿನಿ ರೂಪದಲ್ಲಿ ಶ್ರೀ ಬನಶಂಕರಿ ದೇವಿ





ದಾವಣಗೆರೆ, ಅ.15- ನಗರದ ಡಿಸಿಎಂ ಟೌನ್‌ಶಿಪ್ ಬಳಿಯ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಾಲಯದಲ್ಲಿ ನವರಾತ್ರಿ ಪ್ರಯುಕ್ತ ಪ್ರತಿ ದಿನದಂತೆ ಶ್ರೀ ಬನಶಂಕರಿ ಅಮ್ಮನಿಗೆ ಮಹಿಷಮರ್ಧಿನಿ ಮತ್ತು ವಿಶೇಷ ಪುಷ್ಪಗಳ ಅಲಂಕಾರದಲ್ಲಿ ಕಂಗೊಳಿಸುವಂತೆ ಮಾಡಲಾಗಿತ್ತು.

## ಹೊಸಕುಂದವಾಡದಲ್ಲಿ ಬನ್ನಿ ಮುಡಿಯುವ ಸಂಭ್ರಮ



ದಾವಣಗೆರೆ, ಅ.15- ದಸರಾ ಹಬ್ಬದ ಪ್ರಯುಕ್ತ ಹೊಸ ಕುಂದುವಾಡದಲ್ಲಿ ಬಸಪ್ಪ ದೇವರ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಇಟ್ಟು, ಗ್ರಾಮದ ಯುವಕರು ಬರಿಗಾಲಲ್ಲಿ ಪಲ್ಲಕ್ಕಿಯನ್ನು ಹೊತ್ತು ಕುಂದುವಾಡ ಕೆರೆ ಏರಿಯ ಮೇಲೆ ಇರುವ ಚೌಡೇಶ್ವರಿ ದೇವಸ್ಥಾನಕ್ಕೆ ತೆರಳಿ ಸಾಂಪ್ರದಾಯಿಕವಾಗಿ ಬನ್ನಿ ಮುಡಿದು, ಪೂಜೆ ಸಲ್ಲಿಸಿ ನಂತರ ಪುನಃ ಗ್ರಾಮದಲ್ಲಿ ಮೆರವಣಿಗೆ ಮಾಡಿ, ಪೂಜೆ ಸಲ್ಲಿಸಿ ಸಂಭ್ರಮದಿಂದ ದಸರಾ ಮಹೋತ್ಸವ ಆಚರಿಸಿದ್ದು ಕಳೆ ತಂದಿತ್ತು.

### ಬನಶಂಕರಿ ದೇವಿ



ದಾವಣಗೆರೆ ಹಳೇ ಬೇತೂರು ರಸ್ತೆಯಲ್ಲಿರುವ ಶ್ರೀ ಬನಶಂಕರಿ ದೇವಿಗೆ ವಿಶೇಷ ಪೂಜೆ ಹಾಗೂ ಶ್ರೀ ಚೌಡೇಶ್ವರಿ ದೇವಿ ಅಲಂಕಾರವನ್ನು ಮಾಡಲಾಗಿತ್ತು.

### ಭದ್ರಕಾಳಮ್ಮ ದೇವಿ



ಮಲೇಬೆನ್ನೂರು

ಮಲೇಬೆನ್ನೂರು, ಅ.15- ಪಟ್ಟಣದ ಹೊರವಲಯದಲ್ಲಿರುವ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಶ್ರೀ ಭದ್ರಕಾಳಮ್ಮ ದೇವಿಗೆ ಶರನ್ನವರಾತ್ರಿ ಪ್ರಯುಕ್ತ 9ನೇ ದಿನ ಸಿದ್ದಿ ದಾತ್ರೀ ದೇವಿಯ ವಿಶೇಷ ಅಲಂಕಾರ ಮಾಡಲಾಗಿತ್ತು.

### ಕಾಳಿಕಾ ದೇವಿ



ದಾವಣಗೆರೆಯ ಕಾಳಿಕಾದೇವಿ ರಸ್ತೆಯಲ್ಲಿರುವ ಶ್ರೀ ಕಾಳಿಕಾ ದೇವಿ ದೇವಸ್ಥಾನದಲ್ಲಿ ವಿಶೇಷಾಲಂಕಾರ ಮಾಡಲಾಗಿತ್ತು.

### ರಾಜರಾಜೇಶ್ವರಿಗೆ ವಿಶೇಷಾಲಂಕಾರ



ದಾವಣಗೆರೆ ಕೆಟಿಜೆ ನಗರ 17ನೇ ಕ್ರಾಸ್ ನಲ್ಲಿರುವ ರಾಜರಾಜೇಶ್ವರಿ ದೇವಸ್ಥಾನದಲ್ಲಿ ರಾಜರಾಜೇಶ್ವರಿ ಅಮ್ಮನವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು.

### ಗಾಳಿ ದುರ್ಗಾಂಬಿಕ ದೇವಿ



ದಾವಣಗೆರೆ ಕೆ.ಆರ್. ರಸ್ತೆಯ ವೆಂಕಾಭೋವಿ ಕಾಲೋನಿಯ ಶ್ರೀ ಬಸವೇಶ್ವರ ಸ್ವಾಮಿ, ಶ್ರೀ ಗಾಳಿ ದುರ್ಗಾಂಬಿಕ ದೇವಸ್ಥಾನದಲ್ಲಿ ನವರಾತ್ರಿಯ 5ನೇ ದಿನ ಶ್ರೀ ಮಹಾಗೌರಿ ಅಲಂಕಾರ ಮಾಡಲಾಗಿತ್ತು.

ಕುಂದೂರಿನಲ್ಲಿ 'ಸಿಎಂ ಗ್ರಾಮ ವಾಸ್ತವ್ಯ'

## ಸಿಎಂ ಭಾಗ್ಯ

ತನ್ನ ಹಳೆಯ ಕೊಳೆಯನ್ನು
ಕಳೆದುಕೊಂಡ ಚರಂಡಿಗಳು
ಮೈಕೊಡವಿ ನಿಂತಿವೆ,
ಕಾರಣ...ಸಿಎಂ ಬರುವ ಭಾಗ್ಯಕ್ಕೆ.

ಕ್ಯಾಕರಿಸಿ ಉಗಿದರೂ ಸಹಾ
ಉಗಿಸಿಕೊಂಡ ಸಿಸಿ ರಸ್ತೆಗಳು
ಪಳ ಪಳ ಕಣ್ಬಿಟ್ಟಿವೆ,
ಕಾರಣ... ಸಿಎಂ ಬರುವ ಭಾಗ್ಯಕ್ಕೆ.

ಕಗ್ಗತ್ತಲ ರಾತ್ರಿಯ ಕತ್ತಲು ರಾತ್ರಿಗೆ,
ವಾಮಮಾರ್ಗಕ್ಕೆ ಸಾಕ್ಷೀಭೂತವಾದ
ಬಲ್ಬೇ ಇಲ್ಲದ ಕಂಬಗಳು ಲಕಲಕ ಎನ್ನುತ್ತಿವೆ
ಕಾರಣ... ಸಿಎಂ ಬರುವ ಭಾಗ್ಯಕ್ಕೆ.

ಕೆಲಸವಿಲ್ಲದೆ ಕಟ್ಟೆ ಕಾಯುತ್ತಿದ್ದ
ತಳಸಮುದಾಯದ ಶ್ರಮಿಕ ವರ್ಗಕ್ಕೆ,
ವಾರದ ಕಾರ್ಯಕ್ಕೆ ಹಿಟ್ಟು ಸಿಗುತ್ತಿದೆ,
ಕಾರಣ... ಸಿಎಂ ಬರುವ ಭಾಗ್ಯಕ್ಕೆ.

ದರ್ಜಿಯು ಮರ್ಜಿಗೆ ಸಿಲುಕಿ
ಜನನಾಯಕರೆನಿಸಿಕೊಳ್ಳುವವರ...?
ಬಿಳಿಯ ಬಟ್ಟೆ ಕತ್ತರಿಸಿ
ಅಂಗಿ-ಪ್ಯಾಂಟುಗಳ ಒಲಿಯುತ್ತಿದ್ದಾನೆ,
ಕಾರಣ... ಸಿಎಂ ಬರುವ ಭಾಗ್ಯಕ್ಕೆ.

ತಲೆಮಾರುಗಳು ಓದಿ-ಉರುಳಿ
ಶತಮಾನ ಕಂಡ ಜ್ಞಾನ ದೀವಿಗೆ
ಗತವೈಭವವನ್ನು ಸಾರುತ್ತಿದೆ
ಕಾರಣ... ಸಿಎಂ ಬರುವ ಭಾಗ್ಯಕ್ಕೆ.

ಸರ್ಕಾರಿ ಕಚೇರಿಗಳು ಸುಣ್ಣ ಬಣ್ಣ ಕಂಡಿರಲಿ,
ತ್ವರಿತವಾಗಿ ಜನಪರ ಕಾರ್ಯ ನಡೆಯಲಿ,
ತಿಂಗಳಿಗೊಂದಾವರ್ತಿ ಸಿಎಂ ಬರಲಿ,
'ಸಿಎಂ ಭಾಗ್ಯ ನಮಗೇ ಇರಲಿ'
ಎಂದು ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಒಟ್ಟಿನಲ್ಲಿ... ದಸರಾ ಕಂಪಿಗೆ
ಸಿಎಂ ಬರುವ ಇಂಪು ಸೇರಿ
ಕುಂದೂರೆಲ್ಲಾ ರಂಗಾಗಿದೆ
ಜನನಾಯಕರೆಲ್ಲಾ ಸೊಂಪಾಗಿದ್ದಾರೆ...!!!

**- ಮಾಡಾಳ್ ಗೌಡ್ರು ನಾಗರಾಜ್**
ಶಿಕ್ಷಕರು, ಕುಂದೂರು.
ಮೊ: 9611480732

# ರೈತರ ಕುಂದು - ಕೊರತೆ ನಿವಾರಣೆ ಅಗತ್ಯ ಕ್ರಮ

**ತಹಶೀಲ್ದಾರ್ ಗಿರೀಶ್**

ದಾವಣಗೆರೆ, ಅ.15- ಗ್ರಾಮೀಣ ರೈತರ ಜಮೀನಿನ ಸಮಸ್ಯೆಗಳನ್ನು ಇತ್ಯರ್ಥಗೊಳಿಸುವ ಸಲುವಾಗಿ ಇಲ್ಲಿನ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ತಹಶೀಲ್ದಾರ್ ಸಮ್ಮುಖದಲ್ಲಿ ಕುಂದುಕೊರತೆ ಸಭೆ ಕರೆಯಲಾಗಿತ್ತು.

ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಶಾಖೆಯ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದು ಜಮೀನಿನ ಸಂಬಂಧ ಇರುವ ಸಮಸ್ಯೆಗಳನ್ನು ಹೇಳಿಕೊಂಡರು.

ತಹಶೀಲ್ದಾರ್ ಬಿ.ಎನ್. ಗಿರೀಶ್ ಅವರು, ವೈಯಕ್ತಿಕವಾಗಿ ಪ್ರತಿಯೊಬ್ಬರ ಸಮಸ್ಯೆಗಳನ್ನು ಶಾಂತಚಿತ್ತದಿಂದ ಆಲಿಸಿ, ಈ ತಿಂಗಳ ಅಂತ್ಯದೊಳಗೆ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

ಭೂ ವ್ಯಾಜ್ಯ, ಪೋಡಿ ಪ್ರಕರಣಗಳು, ಪಾರಿಕತ್ ಪಾಲುವಿಭಾಗ, ಜಮೀನಿನಲ್ಲಿ ದಾರಿ ಬಿಟ್ಟು ಕೊಡದಿರುವುದು ಸೇರಿದಂತೆ ಇತರೆ ವ್ಯಾಜ್ಯಗಳನ್ನು ಶೀಘ್ರವೇ ಇತ್ಯರ್ಥಪಡಿಸಲು ಸಭೆಯಲ್ಲಿ ಹಾಜರಿದ್ದ ಸರ್ವೇ ಇಲಾಖೆ ಹಾಗೂ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಎಡಿಎಲ್‌ಆರ್ ರೋಹಿತ್, ಶಿರಸ್ತೇದಾರ್ ಶಕೀಲ್ ಅಹ್ಮದ್ ಸೇರಿದಂತೆ ರಾಜಸ್ವ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ರೈತರ ಸಭೆಯಲ್ಲಿದ್ದು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ರೈತ ಮುಖಂಡರಾದ ಬುಳ್ಳಾಪುರದ ಹನುಮಂತಪ್ಪ, ಈಚಘಟ್ಟದ ಕರಿಬಸಪ್ಪ, ಕೊಗ್ಗನೂರು ಹನುಮಂತಪ್ಪ, ಕರಿಲಕ್ಕೇನಹಳ್ಳಿ ಹನುಮಂತಪ್ಪ, ತುಪ್ಪದಹಳ್ಳಿ ಬಸವರಾಜಪ್ಪ, ಬಸಪ್ಪ, ತಿಪ್ಪಣ್ಣ ಮತ್ತಿತರರು ಉಪಸ್ಥಿತರಿದ್ದರು.

## ವಿಕಲಚೇತನರ ಕ್ಷೇತ್ರದಲ್ಲಿನ ಸೇವೆಗೆ ನೀಡುವ ಪ್ರಶಸ್ತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಅ. 15- ವಿಕಲಚೇತನರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವ ವ್ಯಕ್ತಿ ಅಥವಾ ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಉದ್ದೇಶಿಸಿದ್ದು, ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ನಿಗದಿತ ಅರ್ಜಿ ನಮೂನೆಗಳನ್ನು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ಶಂಕರಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 21 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಸಹಾಯವಾಣಿ: 08192-263939 ಹಾಗೂ ಇಲಾಖೆಯ ವೆಬ್‌ಸೈಟ್ www.dwdsc.kar.nic.in ನ್ನು ಸಂಪರ್ಕಿಸಬಹುದು.

### ಓದುಗರ ಪತ್ರ

## ಜೆ.ಹೆಚ್. ಪಟೇಲ್ ಬಡಾವಣೆಗೆ ಸಿಟಿ ಬಸ್ ಸೌಲಭ್ಯ ಒದಗಿಸಿ

**ಮಾನ್ಯರೇ,**

ದಾವಣಗೆರೆ ಜೆ.ಹೆಚ್. ಪಟೇಲ್ ಬಡಾವಣೆಯು ಸಾಕಷ್ಟು ಅಭಿವೃದ್ಧಿಯಾಗಿದ್ದು, ಇನ್ನೂ ಅನೇಕ ಮನೆಗಳು ನಿರ್ಮಾಣ ಹಂತದಲ್ಲಿವೆ, ಜನಸಂದಣಿಯಿಂದ ಕೂಡಿದೆ. ಆದರೆ, ಬಡಾವಣೆ ವಾಸಿಗಳು ಓಡಾಡಲು ಸಿಟಿ ಬಸ್ ಸೌಲಭ್ಯವಿಲ್ಲದೇ ಜನರಿಗೆ ಅನಾನುಕೂಲವಾಗಿದೆ. ಇದೇ ಬಡಾವಣೆಯಲ್ಲಿ ಬಾಲಕರ ಹಾಗೂ ಬಾಲಕಿಯರ ಹಾಸ್ಟೆಲ್‌ಗಳು ಇವೆ. ಈ ಹಿಂದೆ ಜೆ.ಹೆಚ್. ಪಟೇಲ್ ಬಡಾವಣೆಯ ವಾಟರ್ ಟ್ಯಾಂಕ್ ವೃತ್ತದವರೆಗೆ ಓಡಾಡುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಕೋವಿಡ್ ಕಾರಣದಿಂದ ಬಂದ್ ಆಗಿದ್ದು, ಇದುವರೆಗೆ ಬಸ್ ಸಂಚಾರ ಆರಂಭವಾಗಿಲ್ಲ.

ದಯವಿಟ್ಟು ಜೆ.ಹೆಚ್. ಪಟೇಲ್ ವಾಟರ್ ಟ್ಯಾಂಕ್ ವೃತ್ತದಿಂದ ಹೊಸದಾಗಿ ನಿರ್ಮಾಣವಾಗಿರುವ (ಡಿಸಿ ಮನೆ ಎದುರಿನ ರಸ್ತೆ) ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ (ಬಿಸ್ಸೆನ್ನೆಲ್ ಹತ್ತಿರ) ಶಾಮನೂರಿನವರೆಗೆ ಬರುವ ನಗರ ಸಾರಿಗೆ ಬಸ್ ವ್ಯವಸ್ಥೆ ಕಲ್ಪಿಸುವಂತೆ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನ ಹರಿಸಲಿ ಎಂಬುದು ನಮ್ಮ ಆಶಯ.

ಇಂತಿ ನೊಂದ ವಿದ್ಯಾರ್ಥಿ ಪೋಷಕರು
**ಕೆ. ನಂದಕುಮಾರ್, ಜೆ.ಹೆಚ್. ಬಡಾವಣೆ.**

## ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಸ್ವಚ್ಛತೆ ಮರೀಚಿಕೆ

ದಾವಣಗೆರೆ ಸಮೀಪದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ ಉದ್ಯಾನವನಗಳಿವೆ. ಆದರೂ ಸ್ವಚ್ಛತೆ ಇರುವುದಿಲ್ಲ. ಕಸ ವಿಲೇವಾರಿ ವಿಳಂಬವಾಗುತ್ತಿದ್ದು, ಮಕ್ಕಳು ಮತ್ತು ನಾಗರಿಕರು ಆತಂಕದಲ್ಲಿದ್ದಾರೆ.

ಸಣ್ಣ ಸಣ್ಣ ಹೊಂಡಗಳನ್ನು ನಿರ್ಮಿಸಿ, ನೀರು ಸಂಗ್ರಹಿಸಿದರೆ ಅಂತರ್ಜಲ ಹೆಚ್ಚಾಗುವ ಸಾಧ್ಯತೆ ಇದೆ. ಉದ್ಯಾನವನಗಳ ಸ್ವಚ್ಚತೆ ಕಡೆ ಗಮನ ಹರಿಸಬೇಕು. ಕಸ ವಿಲೇವಾರಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು.

**- ಕೆ.ಆರ್. ಜಯಪ್ರಕಾಶ್, ಕತ್ತಲಗೆರೆ**

# ದೇಶದಲ್ಲಿ ಗೊಬ್ಬರದ ಕೊರತೆ ಇಲ್ಲ

**ಮಧ್ಯವರ್ತಿಗಳಿಂದ ರೈತರಲ್ಲಿ ಆತಂಕ ಮೂಡಿಸುವ ಯತ್ನ : ಕೇಂದ್ರ ಸಚಿವ ಖೂಬಾ**

ದಾವಣಗೆರೆ, ಅ. 15 - ಕಳೆದ ಏಳು ವರ್ಷಗಳಲ್ಲಿ ದೇಶದಲ್ಲಿ ಎಲ್ಲೂ ಬೀಜ ಹಾಗೂ ಗೊಬ್ಬರದ ಕೊರತೆಯಾಗಿಲ್ಲ. ಮಧ್ಯವರ್ತಿಗಳು ಕೊರತೆ ಇದೆ ಎಂದು ರೈತರಲ್ಲಿ ಆತಂಕ ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಂದ್ರ ರಸಗೊಬ್ಬರ ಖಾತೆ ಅಧೀನ ಸಚಿವ ಭಗವಂತ ಖೂಬಾ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಈ ಬಾರಿ ಉತ್ತಮ ಮಳೆಯಾಗಿದೆ ಹಾಗೂ ಬಿತ್ತನೆ ಹೆಚ್ಚಾಗಿದೆ. ಹೀಗಾಗಿ ರೈತರಿಂದ ಮುಂದಿನ ದಿನಗಳಲ್ಲಿ ಬೇಡಿಕೆ ಹೆಚ್ಚಾಗಬಹುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೆಚ್ಚಿನ ಗೊಬ್ಬರ ಕೇಳಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಕಟ್ಟಿ ಹಾಕಲು ಐ.ಟಿ. ರೈಡ್ ನಡೆಯುತ್ತಿದೆ ಎಂಬ ಆರೋಪ ತಳ್ಳಿ ಹಾಕಿದ ಅವರು, ಯಡಿಯೂರಪ್ಪ ಪ್ರಶ್ನಾತೀತ ನಾಯಕ. ಪ್ರತಿಯೊಂದು ವಿಷಯದಲ್ಲೂ ಪಕ್ಷ ಹಾಗೂ ಸರ್ಕಾರ ಅವರ ಅನುಭವದ ಮಾರ್ಗದರ್ಶನ ಪಡೆಯುತ್ತಿದೆ ಎಂದು ತಿಳಿಸಿದರು.

ಆರ್‌ಎಸ್‌ಎಸ್ ವಿರುದ್ಧ ಕುಮಾರಸ್ವಾಮಿ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ರಾಜಕಾರಣ ಮಾಡಲು ಇಂತಹ ಹೇಳಿಕೆ ನೀಡುತ್ತಿದ್ದಾರೆ. ಅಲ್ಪಸಂಖ್ಯಾತರ ಮತ ಪಡೆಯಲು ಇಂತಹ ಅಸ್ತ್ರ ಬಳಸಲಾಗುತ್ತಿದೆ ಎಂದರು.

ಒಂದೆರಡು ದಿನ ಆರ್‌ಎಸ್‌ಎಸ್ ಕಚೇರಿಗೆ ಹೋಗಿ ಅಧ್ಯಯನ ಮಾಡಿ. ಆರ್‌ಎಸ್‌ಎಸ್ ವಿಶ್ವದಲ್ಲೇ ದೊಡ್ಡ ನಿಸ್ವಾರ್ಥ ಸೇವಾ ಸಂಸ್ಥೆ. ವ್ಯಕ್ತಿ, ಸಮಾಜ ಹಾಗೂ ದೇಶ ನಿರ್ಮಾಣದ ಕೆಲಸ ಮಾಡುತ್ತಿದೆ.

ಅದಕ್ಕೇ ಬೈಯ್ಯುತ್ತಾರೆ ಎಂದರೆ ಅನುಭವ ಇಲ್ಲ, ಚಿಲ್ಲರೆ ರಾಜಕೀಯ ಮಾಡುತ್ತಿದ್ದಾರೆ ಎಂದರ್ಥ. ಇದು ಅವರಿಗೆ ಶೋಭೆ ತರುವುದಲ್ಲ. ಬಿಜೆಪಿಗೆ ನೇರವಾಗಿ ಮಾತನಾಡಿದರೆ ಉತ್ತರ ಕೊಡುತ್ತೇವೆ. ಸಂಘಕ್ಕೆ ಅಂದು, ಅವರೇ ತಮ್ಮ ಮರ್ಯಾದೆಯನ್ನೇ ಕಳೆದುಕೊಳ್ಳುತ್ತಾರೆ ಎಂದು ಹೇಳಿದರು. ದೇಶದ ವಿದ್ಯಾರ್ಥಿಗಳು ಉಜ್ವಲ ಭವಿಷ್ಯ ಕಾಣುವುದನ್ನು ತಡೆಯಲಾಗದೇ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಕಾಂಗ್ರೆಸ್ ವಿರೋಧಿಸುತ್ತಿದೆ ಎಂದವರು ಮತ್ತೊಂದು ಪ್ರಶ್ನೆಗೆ ಹೇಳಿದರು.

ತುಷ್ಟೀಕರಣ ನೀತಿ, ಜಾತಿ ರಾಜಕೀಯ ಮಾಡುವುದರಲ್ಲೇ ಕಾಂಗ್ರೆಸ್ ಮಗ್ನವಾಗಿದೆ. ದೇಶದ ವಿಕಾಸದ ಹಾದಿಯಲ್ಲಿ ಕಾಂಗ್ರೆಸ್ ಅಡ್ಡಿಪಡಿಸುತ್ತಿದೆ ಎಂದು ತರಾಟೆಗೆ ತೆಗೆದುಕೊಂಡರು.

## ಕರುಣಾ ಟ್ರಸ್ಟ್‌ನಿಂದ ತಳ್ಳುಗಾಡಿ ವಿತರಣೆ



ದಾವಣಗೆರೆ, ಅ.10-ಕರುಣಾ ಟ್ರಸ್ಟಿನಿಂದ ಬಡವರ ಕುಟುಂಬ ನಿರ್ವಹಣೆಗೆ ತಳ್ಳುವ ತರಕಾರಿ ಗಾಡಿಗಳನ್ನು ವಿತರಿಸಲಾಯಿತು. ಪತ್ರಕರ್ತ ವಿಶಾಖ್ ಎನ್., ಟ್ರಸ್ಟಿನ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ನಿರ್ದೇಶಕರಾದ ಮಂಜುಳಾ ಬಸವಲಿಂಗಪ್ಪ, ಪ್ರೊ. ಬಿ.ಎನ್.ವೀರಪ್ಪ ಇತರರು ಉಪಸ್ಥಿತರಿದ್ದರು.

## ದಲಿತ ಸಮಿತಿಗೆ ಮಾರಿಕೊಪ್ಪ ಮಂಜಪ್ಪ ಆಯ್ಕೆ

ಹೊನ್ನಾಳಿ, ಅ.15- ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲ್ಲೂಕು ಪ್ರಧಾನ ಸಂಚಾಲಕರಾಗಿ ಮಾರಿಕೊಪ್ಪ ಎ.ಕೆ. ಮಂಜಪ್ಪ ಆಯ್ಕೆಯಾಗಿದ್ದಾರೆ.

ಉಪ ಪ್ರಧಾನ ಸಂಚಾಲಕರಾಗಿ ಮಲೇಕುಂಬಳೂರು ಕೆ. ಜಗದೀಶ್, ಪ್ರಧಾನ ಕಾರ್ಯದರ್ಶಿ ಕುಂದೂರು ಷಣ್ಮುಖ, ಸಂಘಟನಾ ಸಂಚಾಲಕ ಬಡಾವಣೆ ರವಿ, ಹೆಚ್. ಕಡದಕಟ್ಟೆ ರಾಘವೇಂದ್ರ, ಸಂಚಾಲಕ ಕುಂದೂರು ಅನಿಲ್, ತಾಲ್ಲೂಕು ಖಜಾಂಚಿಯಾಗಿ ಕುಂಬಳೂರು ಕೆ. ತಿಪ್ಪೇಸ್ವಾಮಿ ಆಯ್ಕೆಯಾಗಿದ್ದಾರೆ.

ಜಿಲ್ಲಾ ಸಮಿತಿಯ ಬೆಂಗಳೂರು ವಿಭಾಗೀಯ ಮಟ್ಟದ ಸಂಚಾಲಕ ಎ.ಡಿ. ಯಶವಂತ್, ಜಿಲ್ಲಾ ಸಂಚಾಲಕ ಕೆ. ನಿಂಗಪ್ಪ, ಸದಾನಂದ್ ಚಿಕ್ಕನಹಳ್ಳಿ, ಮಾಳಗಿ ಹನುಮಂತಪ್ಪ, ತಿಪ್ಪೇಶ್ ಮಾಳಗಿ, ಜೆ.ಬಿ. ಕೃಷ್ಣಮೂರ್ತಿ ಇನ್ನಿತರರಿದ್ದರು.

## ಬಿಎಸ್ಸೆನ್ನೆಲ್ ಫ್ರಾಂಚೈಸಿಗೆ ಅರ್ಜಿ

ದಾವಣಗೆರೆ, ಅ.15- ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ಗ್ರಾಹಕರಿಗೆ ಬಿಎಸ್‌ಎನ್‌ಎಲ್ ಸಿಮ್ ಕರೆನ್ಸಿ ಒದಗಿಸಲು ಆಸಕ್ತ ಫ್ರಾಂಚೈಸಿ ಅಥವಾ ಗ್ರಾಮಾಂತರ ಫ್ರಾಂಚೈಸಿಯಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೊಸದುರ್ಗ-ಹೊಳಲ್ಕೆರೆಗಳಲ್ಲಿ ಫ್ರಾಂಚೈಸಿ ಹಾಗೂ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಎಲ್ಲ ತಾಲ್ಲೂಕು, ಹೋಬಳಿ ಮತ್ತು ಎಲ್ಲಾ ಗ್ರಾಮಗಳಲ್ಲಿ ಗ್ರಾಮಾಂತರ ಫ್ರಾಂಚೈಸಿಯಾಗಿ ಕಾರ್ಯ ನಿರ್ವಹಿಸುವವರಿಗೆ ಇದೊಂದು ಸುವರ್ಣಾವಕಾಶವಾಗಿದೆ. ವಿವರ ಮಾಹಿತಿಗಾಗಿ ಮೊ. 9483194164, ದೂರವಾಣಿ: 08192-255256 ಗೆ ಸಂಪರ್ಕಿಸಬಹುದಾಗಿದೆ.

**ಬೇಕಾಗಿದ್ದಾರೆ**

ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು
ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
*ತಕ್ಷಣ ಸಂಪರ್ಕಿಸಿರಿ :*
**ಸಾಯಿ ಕಲೆಕ್ಷನ್ಸ್**
ಜಯನಗರ ಬಿ.ಬ್ಲಾಕ್, S. S ಹೈಟೆಕ್ ಹಾಸ್ಪಿಟಲ್ ರೋಡ್.
**ಮೊ. 97420 97140, 80733 17926**

**ಸಾರ್ವಜನಿಕರ ಗಮನಕ್ಕೆ**

ದಾವಣಗೆರೆ ನಗರದಲ್ಲಿರುವ ನಂದಿಗುಡಿ ಹಾಸ್ಟೆಲ್ ಆವರಣದಲ್ಲಿ ದಿನಾಂಕ: 17.10.2021 ರಂದು ಭಾನುವಾರ ಬೆಳಿಗ್ಗೆ ಸಮಯ 11 ಗಂಟೆಗೆ ಶ್ರೀಶ್ರೀಶ್ರೀ 1108 ಜಗದ್ಗುರು ಸಿದ್ದರಾಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳು, ವೃಷಭಪುರಿ ಸಂಸ್ಥಾನ ಬೃಹನ್ಮಠ ನಂದಿಗುಡಿ, ಹರಿಹರ ತಾ. ದಾವಣಗೆರೆ ಜಿಲ್ಲೆ, ಇವರ ಸಾನ್ನಿಧ್ಯದಲ್ಲಿ ನಂದಿಗುಡಿ ಹಾಸ್ಟೆಲ್ ಅಭಿವೃದ್ಧಿ ಕುರಿತು ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಆದ ಪ್ರಯುಕ್ತ ಸಮಾಜ ಬಾಂಧವರು ಭಾಗವಹಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿ.

**ಕೆ.ಜಿ. ಶಾಂತರಾಜು, ವಕೀಲರು**
ನೊಳಂಬ ವೀರಶೈವ ಸಮಾಜ ದಾವಣಗೆರೆ. # 3360, 16ನೇ ಮುಖ್ಯ ರಸ್ತೆ
ಎಂ.ಸಿ.ಸಿ ಬಿ.ಬ್ಲಾಕ್, ದಾವಣಗೆರೆ. ಫೋ. 94482 33216

Wewin
wewinbazaar.com
WANTED
GRAPHICAL DESIGNER
TELE EXECUTIVE,
PERSONAL ASSISTANT (LADIES)
Send your Resume to this mail ID
kavyarockzzmsipl@gmail.com
MAHARAJ E-MART Pvt.Ltd.,
No. 768/500, Lokikere Main Road,
Near Industrial Area, Davangere-577 005.
9513636530, 9513636532

# 21ನೇ ವಾರ್ಡ್‌ನ ಸರ್ಕಾರಿ ಶಾಲೆಗೆ ಎಸ್‌ಡಿಎಂಸಿ ಅಧ್ಯಕ್ಷರಾಗಿ ಸಿದ್ದಾರ್ಥ್



ದಾವಣಗೆರೆ, ಅ.15- ಪಾಲಿಕೆಯ 21ನೇ ವಾರ್ಡ್ ಬಸಾಪುರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಾಮಸ್ಥರು ಹಾಗೂ ಪೋಷಕರ ಸಮ್ಮುಖದಲ್ಲಿ ಎಸ್‌ಡಿಎಂಸಿ ಸದಸ್ಯರುಗಳನ್ನು ಆಯ್ಕೆ ಮಾಡಲಾಯಿತು. ನಂತರ ಅಧ್ಯಕ್ಷರಾಗಿ ಸಿದ್ದಾರ್ಥ್ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ನಾಗವೇಣಿ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಗ್ರಾಮದ ಮುಖಂಡರಾದ ಎಸ್.ಸುರೇಂದ್ರಪ್ಪ, ಸಿ. ಮಹೇಶ್ವರಪ್ಪ, ನಾಗೇಂದ್ರಚಾರ್, ಎಂ.ಎಸ್.ಕೊಟ್ರಯ್ಯ, ಕೆ.ಎಲ್.ಹರೀಶ್, ವಿಠಲಾಪುರದ ಪ್ರಕಾಶ್, ಕೆ.ಬಿ.ಲಿಂಗರಾಜ್, ಹೆಚ್.ಮಹೇಂದ್ರ, ಬಿ.ಕೆ. ದೇವೇಂದ್ರಪ್ಪ, ಟಿ.ಎಸ್.ಮರಳಸಿದ್ದಪ್ಪ, ಎನ್.ಎಂ.ಕೊಟ್ರಯ್ಯ, ತಿಪ್ಪೇಸ್ವಾಮಿ, ತಿಪ್ಪೇಶ್, ಹೆಗ್ಗಪ್ಪ, ಉಮೇಶ್, ವೀರೇಶ್, ಲೋಕೇಶ್, ನಿಂಗಪ್ಪ, ಹನುಮಂತಪ್ಪ, ಪ್ರಭಾರಿ ಮುಖ್ಯೋಪಾಧ್ಯಾಯರಾದ ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

ಉತ್ತರ ವಲಯ ಬಿಇಓ ಕಚೇರಿಯ ಶ್ರೀಮತಿ ಶಿವಲೀಲಾ, ಆನೆಕೊಂಡ ಕ್ಲಸ್ಟರ್‌ನ ಸಿಆರ್‌ಪಿ ಶೌಕತ್ ಅಲಿ, ಎಸ್‌ಡಿಎಂಸಿ ರಚನೆ ಮತ್ತು ಅದರ ಕಾರ್ಯಗಳು ಹಾಗೂ ಶಿಕ್ಷಣದ ಬಗ್ಗೆ ಮಾಹಿತಿ ನೀಡಿದರು. ಗ್ರಾಮದ ಮುಖಂಡರು ನೂತನ ಸದಸ್ಯರಿಗೆ ಶುಭ ಕೋರಿದರು. ಹಿರಿಯ ಶಿಕ್ಷಕಿ ಶಶಿಕಲಾ ಸ್ವಾಗತ ಹಾಗೂ ವಂದನಾರ್ಪಣೆ ನೆರವೇರಿಸಿದರು.

# ಮೇಣದ ಬೆಳಕು ಚೆಲ್ಲಿ ಹುತಾತ್ಮ ರೈತರಿಗೆ ಶ್ರದ್ಧಾಂಜಲಿ




ದಾವಣಗೆರೆ, ಅ. 15- ಉತ್ತರ ಪ್ರದೇಶದ ಲಖೀಂಪುರದಲ್ಲಿ ನಡೆದ ರೈತರ ಮಾರಣ ಹೋಮ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ತಕ್ಷಣ ಬಂಧಿಸಿ, ಉಗ್ರವಾದ ಶಿಕ್ಷೆಗೆ ಗುರಿಪಡಿಸಬೇಕು ಮತ್ತು ಮೃತ ಕುಟುಂಬಗಳಿಗೆ ತಲಾ ಒಂದು ಕೋಟಿ ರೂ. ಪರಿಹಾರ ಘೋಷಿಸಬೇಕೆಂದು ಸಂಯುಕ್ತ ಹೋರಾಟ ಕರ್ನಾಟಕ ಜಿಲ್ಲಾ ಸಂಚಾಲಕ ಆವರಗೆರೆ ಹೆಚ್.ಜಿ. ಉಮೇಶ್ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ನಗರದ ಜಯದೇವ ವೃತ್ತದಲ್ಲಿ ಸಂಯುಕ್ತ ಹೋರಾಟ ಕರ್ನಾಟಕ ಜಿಲ್ಲಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ರೈತ ಹುತಾತ್ಮರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಮ್ಮ ಹಕ್ಕುಗಳಿಗಾಗಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಉದ್ದೇಶಪೂರ್ವಕವಾಗಿ ಕಾರು ಹಾಯಿಸಿ ಕೊಲೆಗೈದಿರುವುದು ಅತ್ಯಂತ ಖಂಡನೀಯ. ಮೃತರ ಅವಲಂಬಿತ ಕುಟುಂಬದ ಸದಸ್ಯರಿಗೆ ಸರ್ಕಾರಿ ನೌಕರಿಯನ್ನು ನೀಡಬೇಕು. ಈ ಘಟನೆಗೆ ಕಾರಣರಾದ ಕೇಂದ್ರ ಸರ್ಕಾರದ ಗೃಹಖಾತೆ ರಾಜ್ಯ ಸಚಿವ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ವಜಾಗೊಳಿಸಬೇಕೆಂದು ಆಗ್ರಹಿಸಿದರು.

ರೈತರನ್ನು ವಿನಾಕಾರಣ ಕೊಲೆಗೈಯ್ಯುತ್ತಿರುವ ಬಿಜೆಪಿ ಸರ್ಕಾರವನ್ನು ತೊಲಗಿಸಬೇಕು. ಕೇಂದ್ರ ಸಚಿವರು ತಮ್ಮ ಗೂಂಡಾ ಪ್ರವೃತ್ತಿ ಬಿಡಬೇಕು. ಬಿಜೆಪಿ ತನ್ನ ಅನಾಗರಿಕ ಸಂಸ್ಕೃತಿಯಿಂದ ಹೊರಬೇಕು. ರೈತರ ಮತ್ತು ಕಾರ್ಮಿಕರ ಐಕ್ಯತೆ ಕಾಪಾಡುವ ನಿಟ್ಟಿನಲ್ಲಿ ಸರ್ಕಾರಗಳು ಆಳ್ವಿಕೆ ನಡೆಸಬೇಕಾಗಿದೆ ಎಂದರು.

ರೈತ ಮುಖಂಡ ಮಲ್ಲಾಪುರ ದೇವರಾಜ್, ಮಧು ತೊಗಲೇರಿ ಮಾತನಾಡಿದರು. ಇದೇ ವೇಳೆ ಮುಂಬತ್ತಿ ಹಚ್ಚುವ ಮೂಲಕ ಒಂದು ನಿಮಿಷ ಮೌನಾಚರಣೆ ಮಾಡಿ ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವಿವಿಧ ಸಂಘಟನೆಗಳ ಮುಖಂಡರಾದ ಆವರಗೆರೆ ಚಂದ್ರು, ಹೆಗ್ಗೆರೆ ರಂಗಪ್ಪ, ರಮೇಶ್ ಸಿ. ದಾಸರ್, ಇ. ಶ್ರೀನಿವಾಸ್, ಐರಣಿ ಚಂದ್ರು, ಭೀಮಾರೆಡ್ಡಿ, ಸರೋಜಮ್ಮ, ಶಿಲ್ಪ, ಅನಿಲ್ ಕುಮಾರ್, ಕೆ. ನಾಗಪ್ಪ, ಭಾರತಿ, ಮಹಮ್ಮದ್ ಜಿಕ್ರಿಯಾ, ಆದಿಲ್ ಖಾನ್ ಮತ್ತಿತರರು ಭಾಗವಹಿಸಿದ್ದರು.

# ವಿಕಲಚೇತನರ ಸ್ಕಾಲರ್‌ಶಿಪ್ : ಅರ್ಜಿ

ದಾವಣಗೆರೆ, ಅ. 15- ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯು ನ್ಯಾಷನಲ್ ಇ ಸ್ಕಾಲರ್‌ಶಿಪ್ ಪಡೆಯಲು ವಿಕಲಚೇತನ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮಾಹಿತಿಗೆ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳ ಕಚೇರಿ, ಶಂಕರ ಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಹಾಗೂ ವಿಕಲಚೇತನರ ಸಹಾಯವಾಣಿ ಮತ್ತು ಮಾಹಿತಿ ಸಲಹಾ ಕೇಂದ್ರದ ದೂ ಸಂಖ್ಯೆ 08192-263939 ವಿಕಲಚೇತನರ ಮಾಹಿತಿ ಸಲಹೆಗಾರರು ಜೆ. ದುರುಗೇಶ್ ಮೊ.ಸಂ: 988647711 ಅಥವಾ ವೆಬ್‌ಸೈಟ್ : www.scholarship.gov.in ಅನ್ನು ಸಂಪರ್ಕಿಸಬಹುದು.

# ಗಂಗನಹರಸಿ - ದೊಗ್ಗಳ್ಳಿ ಸಂಪರ್ಕ ಸೇತುವೆ ಕುಸಿತ : ಅಧಿಕಾರಿಗಳ ಭೇಟಿ



ಹರಿಹರ, ಅ.15- ಗಂಗನಹರಸಿ ಮತ್ತು ದೊಗ್ಗಳ್ಳಿ ಗ್ರಾಮದ ಸಂಪರ್ಕ ಸೇತುವೆಯು ಧಾರಾಕಾರ ಮಳೆಯಿಂದಾಗಿ ಕುಸಿದು ಬಿದ್ದ ಪರಿಣಾಮ ಸ್ಥಳಕ್ಕೆ ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರು ಭೇಟಿ ನೀಡಿ, ಎರಡೂ ಗ್ರಾಮಗಳ ಸಾರ್ವಜನಿಕರಿಗೆ ಓಡಾಡಲು ತೊಂದರೆ ಆಗುತ್ತಿರುವುದನ್ನು ಗಮನಿಸಿ, ಇಲ್ಲಿನ ಜನರ ಸಮಸ್ಯೆಯನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸ್ಥಳಕ್ಕೆ ಇಂಜಿನಿಯರ್ ಕಳಿಸಿ, ಸೇತುವೆ ಮರು ನಿರ್ಮಾಣದ ರೂಪುರೇಷೆಗಳನ್ನು ತಯಾರಿಸಲು ಸೂಚಿಸುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಾಲ್ಲೂಕು ಆಡಳಿತದ ಸಿಬ್ಬಂದಿಗಳಾದ ಸಮೀರ್ ಅಹ್ಮದ್, ಕಿರಣ್, ನಾಗರಾಜ್ ಹಾಗು ಇತರರು ಹಾಜರಿದ್ದರು.

# ಶಿಥಿಲಾವಸ್ಥೆಯ 10 ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಮಂಜೂರಾತಿ

ದಾವಣಗೆರೆ, ಅ. 15- ದಾವಣಗೆರೆಯಲ್ಲಿ ಶಿಥಿಲಾವಸ್ಥೆಯಲ್ಲಿರುವ ಅಂಗನವಾಡಿಯ ಹೊಸ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ಸಿಕ್ಕಿರುವುದಾಗಿ ಮಾಹಿತಿ ನೀಡಿದ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್, ಹಳೇ ಕಟ್ಟಡಗಳ ತೆರವಿಗೆ ಮುಂದಾಗುವಂತೆ ಜಿಲ್ಲಾಡಳಿತ ಹಾಗೂ ನಗರ ಪಾಲಿಕೆಗೆ ಸೂಚಿಸಿದರು.

ನಗರದ ಗುರುಭವನ ರಸ್ತೆಯಲ್ಲಿ ಅಮೃತ್ ಮಹೋತ್ಸವದ ಅಂಗವಾಗಿ ಕಳೆದ ವಾರ ಹಮ್ಮಿಕೊಳ್ಳಲಾಗಿದ್ದ ವಿಶ್ವ ಹೃದಯ ದಿನಾಚರಣೆ ಹಾಗೂ ವಿವಿಧ ಇಲಾಖೆಗಳಿಂದ ಹಮ್ಮಿಕೊಂಡಿದ್ದ ಜಾಗೃತಿ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.


ದಾವಣಗೆರೆ ನಗರದಲ್ಲಿ 10 ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಮಂಜೂರಾತಿ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಹೃದಯ ಎಂಬುದು ಮಂದಿರವಿದ್ದಂತೆ. ಪ್ರೀತಿ ಬಯಸಿ, ಪ್ರೀತಿ ಕೊಡುವ ಹೃದಯಕ್ಕೆ ಯಾವುದೇ ಅಪಾಯವಿಲ್ಲ. ಇಂದಿನ ಒತ್ತಡದ ದಿನಗಳಲ್ಲಿ ಪ್ರತಿಯೊಬ್ಬರು ಹೃದಯದ ಕಾಳಜಿ ವಹಿಸುವುದು ಅವಶ್ಯಕ ಎಂದು ಸಲಹೆ ನೀಡಿದರು.

ಪಾಲಿಕೆ ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಯಾವುದೇ ದೇಶ ಶಕ್ತಿಶಾಲಿಯಾಗಿ ಸಮೃದ್ಧಿಯಾಗಬೇಕೆಂದರೆ ಜನರ ಆರೋಗ್ಯ ಬಹು ಮುಖ್ಯ ಪಾತ್ರವಹಿಸುತ್ತದೆ ಎಂದರು.

ಡಿಹೆಚ್‌ಓ ಡಾ. ನಾಗರಾಜ್, ಡಾ. ಎ.ಹೆಚ್.ಶಿವಯೋಗಿಸ್ವಾಮಿ, ಜಿಲ್ಲಾ ಸರ್ಜನ್ ಡಾ. ಜಯಪ್ರಕಾಶ್, ಸ್ಮಾರ್ಟ್ ಸಿಟಿ ಎಂ.ಡಿ. ರವೀಂದ್ರ ಮಲ್ಲಾಪುರ, ಡಾ. ಕೆ.ಹೆಚ್. ಯತೀಶ್, ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ವೆಂಕೋಬ ಧಾಮದಲ್ಲಿ 'ವೆಂಕಟೇಶ ಸ್ತವರಾಜ' ಪಾರಾಯಣ




ರಾಣೇಬೆನ್ನೂರು, ಅ.15- ನಗರದ ಕೋಟೆಯಲ್ಲಿರುವ ವೆಂಕೋಬ ಧಾಮದಲ್ಲಿ ಸೋಮವಾರ ಹಮ್ಮಿಕೊಳ್ಳಲಾದ ವೆಂಕಟೇಶ್ವರ ನವರಾತ್ರಿ ಉತ್ಸವದಲ್ಲಿ ಸ್ಥಳೀಯ ತುಳಸಿ ಭಜನಾ ಮಂಡಳಿಯಿಂದ ವೆಂಕಟೇಶ ಸ್ತವರಾಜ ಮತ್ತು ಸ್ತುತಿರತ್ನಮಾಲಾ ಪಾರಾಯಣ ನಡೆಯಿತು.

ತುಳಸಿ ಭಜನಾ ಮಂಡಳಿಯ ನಿರ್ಮಲಾ ಮಠದ ಅರ್ಚನಾ ಮಠದ, ಮಂಜುಳಾ ಮಠದ ವಿಜಯಾಬಾಯಿ ಚಿಮ್ಮಲಗಿ, ಸುನೀತಾ ನಾಯ್ಕ, ಲೀಲಾ ಚಂದಿ, ವಸುಧಾ ಗುಡಿ, ವಿಜಯಕ್ಕ ಪಾಂಡುರಂಗಿ, ಲಕ್ಷ್ಮೀ ಸಾತೇನಹಳ್ಳಿ, ಸುವರ್ಣ ಪಾವಡಿ, ಸುಧಾ ಪಾಂಡುರಂಗಿ, ಶ್ರೀ ಲಕ್ಷ್ಮೀ ವರಾಹಮೂರ್ತಿ, ಹೇಮಾ ಶಿಗ್ಗಾವಿ, ವೈಷ್ಣವಿ ಚಿಮ್ಮಲಗಿ, ವೀಣಾ ಶಿರಹಟ್ಟಿ ಇನ್ನಿತರರು ಪಾಲ್ಗೊಂಡಿದ್ದರು.

# ಎಐವೈಎಫ್‌ನಿಂದ ರೈತರ ಹುತಾತ್ಮ ದಿನಾಚರಣೆ




ದಾವಣಗೆರೆ, ಅ.15- ರೈತರ ಹುತಾತ್ಮ ದಿನಾಚರಣೆ ಅಂಗವಾಗಿ ಮನೆಯಲ್ಲೇ ದೀಪ ಬೆಳಗಿಸುವುದರ ಮೂಲಕ ಎಐವೈಎಫ್ ವತಿಯಿಂದ ರೈತ ಹುತಾತ್ಮ ದಿನಾಚರಣೆ ಆಚರಿಸಲಾಯಿತು.

3 ರೈತ ಮಾರಕ ಕಾನೂನುಗಳನ್ನು ಜಾರಿಗೊಳಿಸಲು ಹೊರಟಿರುವ ಕೇಂದ್ರ ಸರ್ಕಾರದ ರೈತ ವಿರೋಧಿ ನೀತಿಯನ್ನು ಖಂಡಿಸಿ ನಿರಂತರವಾಗಿ 10 ತಿಂಗಳಿಂದ ದೆಹಲಿಯಲ್ಲಿ ಹೋರಾಟ ಚಳುವಳಿಗಳು ನಡೆಯುತ್ತಿದ್ದರೂ ಕೇಂದ್ರ ಸರ್ಕಾರ ಬೇಡಿಕೆ ಈಡೇರಿಸಿಲ್ಲ ಎಂದು ಎಐವೈಎಫ್ ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ಅಸಮಾಧಾನ ವ್ಯಕ್ತಪಡಿಸಿದರು.

ಉತ್ತರ ಪ್ರದೇಶದಲ್ಲಿ ಲಕಿಂಪುರ್ ಖೇರ್ ನಲ್ಲಿ ಪ್ರತಿಭಟನೆ ನಿರತ ರೈತರ ಮೇಲೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಬೆಂಗಾವಲು ವಾಹನವನ್ನು ಹತ್ತಿಸಿ ಮೂರು ಜನ ರೈತರನ್ನು ಹತ್ಯೆಗೈದಿದ್ದಾರೆ. ಹತ್ಯೆಯಾದ ರೈತರಿಗೆ ಒಂದು ಕೋಟಿ ರೂಪಾಯಿ ಪರಿಹಾರ ಹಾಗೂ ರೈತರ ಕುಟುಂಬಕ್ಕೆ ಸರ್ಕಾರಿ ನೌಕರಿ, ಗಾಯಗೊಂಡಿರುವವರಿಗೆ 50 ಲಕ್ಷ ಪರಿಹಾರ, ರೈತರ ಸಾವಿಗೆ ಕಾರಣರಾದ ಅಜಯ್ ಮಿಶ್ರಾ ಅವರನ್ನು ಸಂಪುಟದಿಂದ ಕೈಬಿಡಬೇಕು. ಅವರ ಮಗ ಆಶಿಶ್ ಮಿಶ್ರಾ ಸಹಚರರನ್ನು ಜೀವಾವಧಿ ಶಿಕ್ಷೆಗೆ ಒಳಪಡಿಸಬೇಕೆಂದು ಆವರಗೆರೆ ವಾಸು ಒತ್ತಾಯಿಸಿದರು.

# ಹರಿಹರ : ಮಳೆ ನೀರು ನುಗ್ಗಿರುವ ಮನೆಗಳಿಗೆ ಪೌರಾಯುಕ್ತರ ಭೇಟಿ



ಹರಿಹರ, ಅ.15- ನಗರ ದಲ್ಲಿ ನಿನ್ನೆ ರಾತ್ರಿ ಸುರಿದ ಭಾರೀ ಮಳೆಗೆ ಹಳೆ ಭರಂ ಪುರ, ಹರ್ಲಾಪುರ, ಕಾಳಿದಾಸ ನಗರ, ವಿಜಯನಗರ ಬಡಾವಣೆ, ಬೆಂಕಿ ನಗರ, ಇಂದ್ರಾನಗರ, ಪ್ರಶಾಂತ್ ನಗರ, ವಿದ್ಯಾನಗರ, ಗಾಂಧಿ ನಗರ ಸೇರಿದಂತೆ ಹಲವು ಬಡಾವಣೆಗಳಲ್ಲಿ ನೀರು ನುಗ್ಗಿರುವ ಮನೆಗಳಿಗೆ ಪೌರಾಯುಕ್ತರಾದ ಶ್ರೀಮತಿ ಎಸ್. ಲಕ್ಷ್ಮಿ ಭೇಟಿ ನೀಡಿ ಆದಷ್ಟು ಬೇಗನೆ ಕ್ರಮಗಳನ್ನು ಕೈಗೊಳ್ಳುವ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಸದಸ್ಯರಾದ ಕೆ.ಜಿ. ಸಿದ್ದೇಶ್, ದಾದಾ ಖಲಂದರ್, ಆರ್.ಸಿ. ಜಾವೇದ್, ಬಿ. ಅಲ್ತಾಫ್, ಕವಿತಾ ಮಾರುತಿ ಬೇಡರ್, ಉಷಾ ಮಂಜುನಾಥ್, ಪಿ.ಎನ್. ವಿರೂಪಾಕ್ಷ, ಗುತ್ತೂರು ಜಂಬಣ್ಣ, ಎ. ವಾಮನಮೂರ್ತಿ, ಅಧಿಕಾರಿಗಳಾದ ನೀರು ಸರಬರಾಜು ಇಂಜಿನಿಯರ್ ಮಂಜುನಾಥ್, ಆರ್.ಓ. ಮಂಜುನಾಥ್ ಇನ್ನಿತರರು ಹಾಜರಿದ್ದರು.

# ಮಳೆ : ಬೆಂಕಿನಗರ ನಿರಾಶ್ರಿತ ಕುಟುಂಬಗಳಿಗೆ ನೆರವು ನೀಡಲು ನಗರಸಭೆ ಸದಸ್ಯರ ಮನವಿ




ಹರಿಹರ, ಅ.15- ಕಳೆದ ಹಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಪಟ್ಟಣದ ಬೆಂಕಿ ನಗರ ಬಡಾವಣೆಯಲ್ಲಿ ಅನೇಕ ಮನೆಗಳಿಗೆ ನೀರು ನುಗ್ಗಿ ಜನ ಜೀವನ ಅಸ್ತವ್ಯಸ್ತವಾಗಿದ್ದು, ಸರ್ಕಾರ ಈ ಕೂಡಲೇ ಗಂಜಿ ಕೇಂದ್ರ ತೆರೆದು, ನಿರಾಶ್ರಿತರ ಕುಟುಂಬಕ್ಕೆ ನೆರವನ್ನು ನೀಡಬೇಕೆಂದು ನಗರಸಭೆ ಸದಸ್ಯರಾದ ದಾದಾ ಖಲಂದರ್, ಕೆ.ಜಿ. ಸಿದ್ದೇಶ್, ಬಿ. ಅಲ್ತಾಫ್, ಸ್ಥಳೀಯ ಮುಖಂಡರಾದ ರಾಜ ಸಾಬ್, ಮಾರುತಿ ಬೇಡರ್, ದಾದಾಪೀರ್ ಭಾನುವಳ್ಳಿ, ಮುನಾಫ್ ಮತ್ತು ನಗರಸಭೆ ಮಾಜಿ ಸದಸ್ಯ ಏಜಾಜ್ ಅಹ್ಮದ್ ಆಗ್ರಹಿಸಿದರು.

ಅಧಿಕಾರಿಗಳು ನಿರಾಶ್ರಿತರ ಮನೆಗಳಿಗೆ ಭೇಟಿ ನೀಡಿ, ನಿರಾಶ್ರಿತರ ಕುಟುಂಬಕ್ಕೆ ಗಂಜಿ ಕೇಂದ್ರ ತೆರೆದು ಅವರಿಗೆ ಊಟ, ವಸತಿ ವ್ಯವಸ್ಥೆ ಮಾಡಬೇಕು. ಆದರೆ ಅದನ್ನು ಮಾಡದೆ ಇದ್ದರೂ ಸಹ ಕೆಲವು ಪತ್ರಿಕೆಗಳಲ್ಲಿ ಗಂಜಿ ಕೇಂದ್ರ ತೆರೆದು, 20 ಕುಟುಂಬಗಳಿಗೆ ಶಾದಿ ಮಹಲ್‌ನಲ್ಲಿ ಊಟ, ತಿಂಡಿ, ವಸತಿ ವ್ಯವಸ್ಥೆ ಮಾಡಲಾಗಿದೆ ಎಂದು ವರದಿಯಾಗಿದೆ. ವರದಿಯ ಆಧಾರದ ಮೇಲೆ ಸರ್ಕಾರಕ್ಕೆ ಲೆಕ್ಕ ತೋರಿಸಿ ಹಣವನ್ನು ಕಬಳಿಸುವುದಕ್ಕೆ ಮುಂದಾಗಿರುವುದನ್ನು ಖಂಡಿಸುವುದಾಗಿ ಸ್ಥಳೀಯ ಮುಖಂಡರು ಮತ್ತು ನಗರಸಭೆಯ ಸದಸ್ಯರು ಆಗ್ರಹಿಸಿದರು.

ದಾದಾಪೀರ್ ಭಾನುವಳ್ಳಿ ಮಾತನಾಡಿ, ಕಳೆದ ಬಾರಿ ಮಳೆ ಹೆಚ್ಚಾದ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಸ್ಥಳಕ್ಕೆ ಭೇಟಿ ಮಾಡಿ ಇಲ್ಲಿನ ಜನರ ಸಮಸ್ಯೆಗಳನ್ನು ಆದಷ್ಟು ಬೇಗನೆ ಪರಿಹರಿಸಲು ಮುಂದಾಗುವುದಾಗಿ ಹೇಳಿ ಹೋಗಿ ಎರಡು ವರ್ಷವಾಯಿತು. ಇದುವರೆಗೂ ಇಲ್ಲಿನ ಜನರ ಸಮಸ್ಯೆಯನ್ನು ಪರಿಹರಿಸಲು ಮುಂದಾಗಿರುವುದಿಲ್ಲ. ಜಿಲ್ಲಾಧಿಕಾರಿಗಳು ಆದಷ್ಟು ಬೇಗನೆ ಇಲ್ಲಿನ ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎಂದು ಹೇಳಿದರು.

# ಸೈನ್ಸ್ ಅಕಾಡೆಮಿಯಲ್ಲಿ ಸ್ಮಾರ್ಟ್ ಗರ್ಲ್ ವರ್ಕ್ ಶಾಪ್

ದಾವಣಗೆರೆ, ಅ.15- ನಗರದ ಸೈನ್ಸ್ ಅಕಾಡೆಮಿ ಪದವಿ ಪೂರ್ವ ಕಾಲೇಜಿನಲ್ಲಿ ಭಾರತೀಯ ಜೈನ್ ಸಂಘಟನೆಯ (ಬಿಜೆಎಸ್) ಸಹಭಾಗಿತ್ವದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಗಾಗಿ ಸ್ಮಾರ್ಟ್ ಗರ್ಲ್ ವರ್ಕ್ ಶಾಪ್ ಕಾರ್ಯಾಗಾರವನ್ನು ನಡೆಸಲಾಯಿತು.

ತರಬೇತಿ ನೀಡಲು ಬೆಂಗಳೂರು ಸ್ಮಾರ್ಟ್ ವರ್ಕ್ ಶಾಪ್‌ನ ತರಬೇತುಗಾರ್ತಿ ಎ.ಹೆಚ್. ಶುಭ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯಾರ್ಥಿನಿಯರಿಗೆ ಬಲ ತುಂಬುವ ಕೆಲಸ ಆಗಬೇಕಿದೆ. ಅವರುಗಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢರಾಗಬೇಕಿದೆ ಎಂದ ಅವರು, ಕಾರ್ಯಾಗಾರ ಈ ನಿಟ್ಟಿನಲ್ಲಿ ಸಹಕಾರಿಯಾಗಲಿದೆ ಎಂದರು.

ಸಮಾರೋಪಕ್ಕೂ ಮೊದಲು ವಿದ್ಯಾರ್ಥಿನಿಯರ ಪೋಷಕರೊಂದಿಗೆ ಮುಕ್ತ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬಿಜೆಎಸ್‌ನ ಸ್ಟೇಟ್ ಹೆಡ್ ಫಾರ್ ಮೈನಾರಿಟಿಯ ಜೆ. ಅಶೋಕ್, ಮಹಿಳಾ ವಿಭಾಗದ ಮಾಜಿ ಅಧ್ಯಕ್ಷರಾದ ಭಾವನಾ ಮೆಹ್ತಾ, ಬಿಜೆಎಸ್‌ನ ಸುನೀಲ್ ಓಸ್ವಾಲ್ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಾಗಾರದಲ್ಲಿ ಸೈನ್ಸ್ ಅಕಾಡೆಮಿ ಕಾಲೇಜು ಅಧ್ಯಕ್ಷ ಎ.ಹೆಚ್. ಶಶಿಕಿರಣ್, ಕಾರ್ಯದರ್ಶಿ ವೈ.ವಿ. ವಿನಯ್ ಮತ್ತು ಇತರರು ಉಪಸ್ಥಿತರಿದ್ದರು.


**ಸೈಟ್ ಮಾರಾಟಕ್ಕೆ (21 ಲಕ್ಷಕ್ಕೆ)**
ದೈವಿಕ್ ಮೋತಿ ರಾಮ್ ರಾವ್ ಸಿಟಿ, ಬೈಪಾಸ್ (ಕುಂದವಾಡ)
30x50 (9x15) ಮೀ. ಪಶ್ಚಿಮ
30x50 (9x15) ಮೀ. ಉತ್ತರ
ಬೂಸ್ನೂರು ಕಿರಣ್ (ಏಜೆಂಟ್)
97315-63409, 98440-63409

**ಸೈಟು ಮಾರಾಟಕ್ಕಿದೆ**
ಕುಂದುವಾಡ ಕೆರೆ, ಕುಂದುವಾಡ ರಸ್ತೆ ಪೂರ್ವ 30×56 25 ಲಕ್ಷ ಮತ್ತು 30 ಲಕ್ಷ, ಪಶ್ಚಿಮ 30×40, 18 ಲಕ್ಷ, ಪಶ್ಚಿಮ 40×60, 38 ಲಕ್ಷ ಸೈಟುಗಳು ಮತ್ತು ಮನೆಗಳ ಮಾರಾಟಕ್ಕೆ ವಿಚಾರಿಸಿ.
ಐಗೂರು ವಿಜಯಕುಮಾರ್
99457 02495

**ವಿದ್ಯಾನಗರ, ಡಾಲರ್ಸ್, ಹೊಸ ಬನಶಂಕರಿ ಲೇಔಟ್‌ನಲ್ಲಿ ಸೈಟುಗಳು ಮಾರಾಟಕ್ಕಿವೆ**
30x50, 30x50 West ಅಕ್ಕ-ಪಕ್ಕ,
30x40, 30x40 West ಅಕ್ಕ-ಪಕ್ಕ,
30x50 East 40 ಅಡಿ ರೋಡಿಗಿದೆ.
30x40 East.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗಿದೆ**
ಹೊಸ ಬನಶಂಕರಿ ಬಡಾವಣೆ (ಬೈಪಾಸ್ ಪಕ್ಕ) D.No. 5, ವಾಸ್ತು ಪ್ರಕಾರ, ಪೂರ್ವದ ಬಾಗಿಲು, 2 ಬೆಡ್‌ರೂಂ ಇರುವ ಹೊಸ ಮನೆ ಬಾಡಿಗೆಗಿದೆ.
86607 37365, 99863 71175

**ಸೈಟುಗಳು ಮಾರಾಟಕ್ಕಿವೆ**
(1) 60x40 North ಸಿದ್ದವೀರಪ್ಪ ಬಡಾವಣೆಯಲ್ಲಿ.
(2) 35x50 South ಆಂಜನೇಯ ಬಡಾವಣೆಯಲ್ಲಿ.
(3) 40x60 South ಕುವೆಂಪು ಬಡಾವಣೆಯಲ್ಲಿ.
(4) 50x68 East South Corner ಆಂಜನೇಯ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಹೊಸ ಕಟ್ಟಡ ಮಾರಾಟಕ್ಕಿದೆ**
ನಿಜಲಿಂಗಪ್ಪ ಬಡಾವಣೆ, ಆಂಜನೇಯ ದೇವಸ್ಥಾನ ಹತ್ತಿರ, ಮೂಲೆ ನಿವೇಶನದಲ್ಲಿ ಹೊಸದಾಗಿ ಕಟ್ಟಿರುವ 3 ಮನೆ ಮತ್ತು 2 ಅಂಗಡಿಗಳುಳ್ಳ 3 ಅಂತಸ್ತಿನ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ
90088 78676

**ಬೇಕಾಗಿದ್ದಾರೆ**
ಹರಿಹರದಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ಹರಿಹರದವರಿಗೆ ಆದ್ಯತೆ ನೀಡಲಾಗುವುದು)
Ph : 80502 19547
63641 33480

**ಲೀಸ್ 12 ಲಕ್ಷ/ಬಾಡಿಗೆ 10,500**
ZP, TV ಸ್ಟೇಷನ್, ನ್ಯಾಯಾಲಯ, ಹೈಟೆಕ್ ಆಸ್ಪತ್ರೆ, ಸರ್.ಎಂ.ವಿ, ಲಲಿತ ಕಾಲೇಜ್, ಶಶಿ ಸೋಪ್, ಸುಬ್ರಮಣ್ಯ ದೇವಸ್ಥಾನದ ಹತ್ತಿರ ಸುಸಜ್ಜಿತ ನೀರು ಲಿಫ್ಟ್, ಕಾರ್ ಪಾರ್ಕಿಂಗ್‌ವುಳ್ಳ ಉತ್ತರ ದಿಕ್ಕಿನ 2 ಬೆಡ್ ರೂಂ ವಾಸ್ತು ಪ್ರಕಾರವಿದೆ.
99865 38099, 99004 11110

**ಸೈಟ್ ಮಾರಾಟಕ್ಕಿದೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ DUDAದ 40×60 ಅಳತೆಯ ನಂ. 428, ಪೂರ್ವ ಮುಖದ (East Facing) ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ (ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)
96208 81115

**ಸೈಟು ಮಾರಾಟಕ್ಕಿದೆ**
ಸಿದ್ದವೀರಪ್ಪ (BIET Main Road) ಪೂರ್ವ 35×50, ಪೂರ್ವ 40×60, ಪಶ್ಚಿಮ 40×60, ಆಂಜನೇಯ ಬಡಾವಣೆ ಉತ್ತರ 35×50 (ಅಕ್ಕ-ಪಕ್ಕ), 52×40, ಪೂರ್ವ-ಉತ್ತರ ಕಾರ್ನರ್ 40×60 ಮತ್ತು ಪಕ್ಕ 40×60
ಐಗೂರು ವಿಜಯಕುಮಾರ್
99457 02495

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಮತ್ತು ರಾತ್ರಿ ಪ್ರತ್ಯೇಕ ಪಾಳಿಯಗಳಲ್ಲಿ ರೂಂ ಬಾಯ್ ಮತ್ತು ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳಾ ಸ್ವೀಪರ್ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
63639 54495

**ಮನೆ ಬಾಡಿಗೆಗೆ ಇದೆ**
2 ಬೆಡ್‌ರೂಂ ಮನೆ ಖಾಲಿ ಇದೆ. ಕಮರ್ಷಿಯಲ್ ಆಫೀಸ್ ಕೆಲಸಕ್ಕೆ ಹಾಗೂ ವಾಸಿಸಲು ಬಾಡಿಗೆಗೆ ಇದೆ. ಬಸವರಾಜ್ ಪೇಟೆ, 2ನೇ ಕ್ರಾಸ್, ಸಿಂಡಿಕೇಟ್ ಬ್ಯಾಂಕ್ ಹತ್ತಿರ, ದಾವಣಗೆರೆ.
95350 17621
91481 85259

**ROOM FOR RENT**
Room with Attached Both room, 2nd Floor, M.C. Colony 'A' Block. Davangere.
86604 56792
97312 90416

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
NH-4 / P.B. Road
Immediate Registration
Contact : 74112 50447

**ಜಮೀನು ಕೊಳ್ಳಲು ಬೇಕಾಗಿರುತ್ತದೆ**
ದಾವಣಗೆರೆ-ಹರಿಹರ (1 ರಿಂದ 25 ಎಕರೆ)
Immediate Registration
Contact : 74112 50447

**WANTED**
Computer Faculty PART TIME (Females Only)
74062 78270

**ಸೈಟ್, ಮನೆ ಮಾರಾಟಕ್ಕಿವೆ**
ವಿದ್ಯಾನಗರ 40x60 1ನೇ ಬಸ್ ಸ್ಟಾಪ್ ಉತ್ತರ, 22x60 ಪಶ್ಚಿಮ, ಸಿದ್ದವೀರಪ್ಪ 30x40 ಹಳೇ ಮನೆ ಪೂರ್ವ 30x40 ಸೈಟ್, 60x40 ಸೈಟ್, ಬಾಪೂಜಿ ಸ್ಕೂಲ್ ಹಿಂಭಾಗ 40x50 ಕಾರ್ನರ್ ಸೈಟ್, 30x50 (ಬಾಡಿಗೆ ಬರುವಂತಹ ಮನೆ), 30x40 ಬಂಟ್ಸ್ ಭವನ ಹತ್ತಿರ, 30x40 ಹೊಸ ಮನೆ, ಡೂಪ್ಲೆಕ್ಸ್, ಸಪ್ತಗಿರಿ ಸ್ಕೂಲ್ ಹತ್ತಿರ, ಜೆ.ಹೆಚ್. ಪಟೇಲ್, 40x60 ರೋಡ್, KHB 40x60 ಪೂರ್ವ, 30x40 ಪಶ್ಚಿಮ
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಬೇಕಾಗಿದ್ದಾರೆ**
ಕಾರ್ ವಾಹನ ಚಾಲಕರು ಮತ್ತು ಶಾಲಾ ವಾಹನ ಚಾಲಕರು ಬೇಕಾಗಿದ್ದಾರೆ.
94492 66133
94488 39229

**ಮನೆಗಳು ಮಾರಾಟಕ್ಕಿವೆ**
1) 40x60 North, ಮೂರು ಬೆಡ್ ರೂಮ್ ಮನೆ ಕುವೆಂಪು ಬಡಾವಣೆಯಲ್ಲಿ.
2) 30x40 West 2 ಬೆಡ್ ರೂಮ್ ಮನೆ ಜಯನಗರದಲ್ಲಿ.
3) 30x40 West 2 ಬೆಡ್ ರೂಮ್ ಮನೆ ಶಾಮನೂರಿನಲ್ಲಿ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಮನೆ ಬಾಡಿಗೆಗಿದೆ**
2BHK ಸುಸಜ್ಜಿತ ಮನೆ ಬಸವೇಶ್ವರ ಬಡಾವಣೆ ಮುಖ್ಯರಸ್ತೆ, ಹೋಟೆಲ್ ಸಾಯಿ ಇಂಟರ್ ನ್ಯಾಷನಲ್ ಹಿಂಭಾಗ, ದಾವಣಗೆರೆ ಇಲ್ಲಿ ಬಾಡಿಗೆಗೆ ಇದೆ.
ಸಂಪರ್ಕಿಸಿ
98441 32621

**ಹುಡುಗರು ಬೇಕಾಗಿದ್ದಾರೆ**
20 Ltr ವಾಟರ್ ಕ್ಯಾನ್ ಸಪ್ಲೈ ಮಾಡಲು ಹುಡುಗರು ಬೇಕಾಗಿದ್ದಾರೆ. (ಡ್ರೈವಿಂಗ್ ಮತ್ತು ಡೆಲಿವರಿ)
ಸಂಪರ್ಕಿಸಿ
97318 91077

**ಮನೆಗಳು ಮಾರಾಟಕ್ಕಿವೆ**
S.S B' Block ಪಶ್ಚಿಮ 30×40 (ಡೂಪ್ಲೆಕ್ಸ್), ಬಸವೇಶ್ವರ ಉತ್ತರ 30×40, ಪೂರ್ವ 30×40 (ಕೆಳಗೆ ಮನೆ ಮೇಲೆ ಡೂಪ್ಲೆಕ್ಸ್) ಬಾಲಾಜಿ ಲೇಔಟ್ ಹೊಸ ಕನ್ನಿಕಾಪರಮೇಶ್ವರ ದೇವಾಲಯ ಹತ್ತಿರ ಪಶ್ಚಿಮ 30×50
ಐಗೂರು ವಿಜಯಕುಮಾರ್
99457 02495

**ಮಾರಾಟಕ್ಕೆ**
* ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64, * ವಿದ್ಯಾನಗರ ಸೈಟ್ (ದಕ್ಷಿಣ) 40×60, * ತರಳಬಾಳು ಬಡಾವಣೆ ಸೈಟ್ (ದಕ್ಷಿಣ) 30×50, * SS ಲೇಔಟ್ ಸೈಟ್ - 40×63 * ಮಹಾಲಕ್ಷ್ಮಿ ಲೇಔಟ್ ಸೈಟ್ (ಉತ್ತಮ್ ಚಂದ್ - ಪಶ್ಚಿಮ) 35×61, * ಶಿಕ್ಷಕರ ಬಡಾವಣೆ 2 ನೇ ಅಂತ (ದಕ್ಷಿಣ-ಆವರಗೆರೆ )30×40,
78996 36597, 99165 25828

**ಬೇಕಾಗಿದ್ದಾರೆ**
ಹೆಸರಾಂತ ಕಂಪನಿಗೆ ಅನುಭವಿ ಟ್ಯಾಲಿ ಆಪರೇಟಿಂಗ್ ಮಹಿಳಾ ಅಕೌಂಟೆಂಟ್ ಅಗತ್ಯವಿದೆ. ಕೆಲಸದ ಸಮಯ : 9.30 ರಿಂದ 5.30
Rigved Scientific Organics
ಕೈಗಾರಿಕಾ ಪ್ರದೇಶ, ಲೋಕಿಕೆರೆ ರಸ್ತೆ,
ಕರೆ : 9986366358

**WANTED**
for Dry fruits shop
Sales Boys
Billing Staff (Ladies) with computer knowledge
94484 54709
99007 08999

**ಮನೆ ಖರೀದಿಗೆ ಮತ್ತು ಲೀಸ್‌ಗಿದೆ**
ಭಗತ್‌ಸಿಂಗ್ ನಗರ, ಮಸೀದಿ ಪಕ್ಕ.
ಸಂಪರ್ಕಿಸಿ: ಶಹಬುದ್ದೀನ್
74119 88337
77958 98578

**ಸೈಟ್ ಮಾರಾಟಕ್ಕಿದೆ**
ಬನಶಂಕರಿ ಬಡಾವಣೆಯಲ್ಲಿ 40x70 ಅಳತೆ ಸೈಟ್ ಮಾರಾಟಕ್ಕಿದೆ ಮತ್ತು 8500sqft ಅಳತೆಯ ಬ್ಯಾಂಕ್, ಸೂಪರ್ ಮಾರ್ಕೆಟ್, ಗೋಡೌನ್ ಮತ್ತಿತರೆ ಉಪಯೋಗಕ್ಕೆ ಅನುಕೂಲವಾದ ಜಾಗ ನೆಲ ಬಾಡಿಗೆಗೆ ದೊರೆಯುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
91081 81864

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲೇ ಇದ್ದು ಅಡುಗೆ ಮಾಡಲು ಮಹಿಳಾ ಸಿಬ್ಬಂದಿ-1 ಬೇಕಾಗಿದ್ದಾರೆ. (ವಸತಿ ವ್ಯವಸ್ಥೆ ಇರುತ್ತದೆ) ಸಂಪರ್ಕಿಸಿ :
86186 42929
08192-252228

**REQUIRED**
Experienced Staff Required for Plywood, Hardware & Lighting Showroom
Contact:
98865 11185

**WANTED**
Receptionist -2 No's(Female) for a Resort, (NH-4 Highway) Near Davanagere.
Qualification: Any Degree with Good Communication Skill & Computer Knowledge
9880975286

**ಸೈಟ್ ಮಾರಾಟಕ್ಕಿವೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 ಪೂರ್ವ, 50x70 ಪೂರ್ವ, 55x84 ದಕ್ಷಿಣ, ಪಶ್ಚಿಮ ಕಾರ್ನರ್, 30x40 ಪಶ್ಚಿಮ, 30x50 ಪೂರ್ವ, 40x60 ಪೂರ್ವ, 40x60 ದಕ್ಷಿಣ, 50x80 ದಕ್ಷಿಣ ಇನ್ನೂ ಅನೇಕ
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

**ಸೈಟು ಮಾರಾಟಕ್ಕಿದೆ**
KHB ಲೇಔಟ್ 40×60 ಉತ್ತರ, 100 ft ರೋಡ್‌ಗೆ ಇದೆ. ರಂಗನಾಥ್ ಬಡಾವಣೆ 30×50 ದಕ್ಷಿಣ ರಶ್ಮಿ ಹಾಸ್ಟೆಲ್ ಹತ್ತಿರ ಸೈಟುಗಳು ಇವೆ.
86181 82332

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡಿಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗ - ಹುಡುಗಿಯರು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ.
98442-94446

**ಗೀತಾ ಟ್ರಾವೆಲ್ಸ್ ದಾವಣಗೆರೆ**
ಮೂರು ದಿನಗಳ ಕಲರ್‌ಫುಲ್ ಹೈದರಾಬಾದ್ ಪ್ರವಾಸ, ಅಕ್ಟೋಬರ್ 27ರಂದು ಪ್ರವಾಸ ಸ್ಥಳಗಳು ಸಾಲರ್ ಜಂಗ್ ಮ್ಯೂಸಿಯಂ, ಎನ್‌ಟಿಆರ್ ಗಾರ್ಡನ್, ಲುಂಬಿನಿ ಪಾರ್ಕ್, ಲೇಸರ್ ಶೋ, ಚಾರ್ಮಿನಾರ್, ಬಿರ್ಲಾ ಮಂದಿರ, ಸ್ನೋ ವರ್ಲ್ಡ್, ರಾಮೋಜಿ ಫಿಲಂ ಸಿಟಿ.
ಎಸ್.ಎ. ರಾಜು
9448 162499, 9945 534966

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ನೇರ ಪರೀಕ್ಷೆಗಳು**
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC, SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ. ಕೊನೆಯ ದಿ:23.10.2021
ಮಾನಸ ಎಜುಕೇಷನ್ ಟ್ರಸ್ಟ್(ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**Sandeep Rexine House**
Dasara Festival Offer
Buy Any Bed
25% Discount + 2 Pillow Free, Duroflex & Comfort Sleep Company Bed.
A.V.K.College Road
98860 26813

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana Collage Road, Vidyanagara, 2nd main, Davangere
77603 16576
90080 55813

# ಸಿಂಘು ಗಡಿಯಲ್ಲಿ ಬಡಿದು ಹತ್ಯೆ

**ಕೈ ಕತ್ತರಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದ ಬ್ಯಾರಿಕೇಡ್‌ಗೆ ಕಟ್ಟಿದ ನಿಹಾಂಗ್‌ಗಳು**

ಸಿಂಘು, ಅ. 15 - ವ್ಯಕ್ತಿಯೊಬ್ಬರನ್ನು ಬಡಿದು ಹತ್ಯೆಗೈದ ನಂತರ ಅವರ ಕೈ ಕತ್ತರಿಸಿ ಮೃತದೇಹವನ್ನು ದೆಹಲಿ ಹಾಗೂ ಹರಿಯಾಣಗಳ ಗಡಿಯಲ್ಲಿ ರೈತರು ಪ್ರತಿಭಟನೆ ನಡೆಸುತ್ತಿರುವ ಜಾಗದ ಬ್ಯಾರಿಕೇಡ್‌ಗೆ ಕಟ್ಟಿದ ಬರ್ಬರ ಘಟನೆ ನಡೆದಿದೆ.

ಸಿಖ್ ಸಮುದಾಯಕ್ಕೆ ಸೇರಿದ ಪಂಗಡವಾದ ನಿಹಾಂಗ್‌ಗೆ ಸೇರಿದವರು ಈ ಕೃತ್ಯ ಎಸಗಿದ್ದಾರೆ. ಸಿಖ್ಖರ ಧರ್ಮಗ್ರಂಥವನ್ನು ಅವಮಾನಿಸಿದ್ದಾಗಿ ವ್ಯಕ್ತಿಯನ್ನು ಆರೋಪಿಸಿ ಬಡಿಯುತ್ತಿರುವ ವಿಡಿಯೋ ದೃಶ್ಯಗಳನ್ನು ಹರಿಬಿಡಲಾಗಿದೆ.

ಪಂಜಾಬ್‌ನ ತಾರ್ನ್ ತರ್ನ್ ಪ್ರದೇಶಕ್ಕೆ ಸೇರಿದ ಲಖ ಬೀರ್ ಸಿಂಗ್ ಎಂಬ 35 ವರ್ಷದ ಕಾರ್ಮಿಕ ಹತ್ಯೆಗೀಡಾಗಿದ್ದಾನೆ. ಕಳೆದ ಕೆಲ ತಿಂಗಳುಗಳಿಂದ ರೈತ ಸಂಘಟನೆಗಳು ಪ್ರತಿಭಟನೆ ನಡೆಸುತ್ತಿರುವ ಸ್ಥಳದ ಬಳಿಯೇ ಮೃತದೇಹ ಪತ್ತೆಯಾಗಿದೆ. ಹತ್ಯೆ ನಡೆದ ನಂತರ ಮೃತದೇಹ ಪಡೆಯಲು ತೆರಳಿದ ಪೊಲೀಸರಿಗೆ ಕೆಲವರು ವಿರೋಧಿಸಿದ್ದಾರೆ. ನಂತರ ಪೊಲೀಸರು ವಿರೋಧಿಸುತ್ತಿದ್ದವರನ್ನು ಹಿಮ್ಮೆಟ್ಟಿಸಿ ಮೃತದೇಹ ಪಡೆದಿದ್ದಾರೆ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದೇವೆ ಎಂದು ಹರಿಯಾಣದ ಪೊಲೀಸ್ ವಕ್ತಾರರು ಹೇಳಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಓರ್ವ ವ್ಯಕ್ತಿಯನ್ನು ವಶಕ್ಕೆ ಪಡೆಯಲಾಗಿದೆ. ಮೃತ ವ್ಯಕ್ತಿಯ ತಂದೆ ಹಾಗೂ ತಾಯಿಗಳು ಕೆಲ ವರ್ಷಗಳಿಂದ ಹಿಂದೆ ಮೃತಪಟ್ಟಿದ್ದರು. ಅವರ ಪತ್ನಿ ಹಾಗೂ ಮೂವರು ಮಕ್ಕಳು ಸಂಬಂಧಿಗಳ ಜೊತೆ ಇದ್ದಾರೆ. ಲಖಬೀರ್ ಸಿಂಗ್ ತಮ್ಮ ಸಹೋದರಿ ಜೊತೆ ಇದ್ದರು ಎಂದು ಅವರ ಗ್ರಾಮದವರು ಹೇಳಿದ್ದಾರೆ.

ಈ ನಡುವೆ ಹೇಳಿಕೆ ನೀಡಿರುವ ಪ್ರತಿಭಟನಾ ನಿರತ ರೈತ ಸಂಘಟನೆಗಳ ಒಕ್ಕೂಟವಾದ ಎಸ್.ಕೆ.ಎಂ., ಹತ್ಯೆಗೀಡಾದ ವ್ಯಕ್ತಿ ಹಾಗೂ ಹತ್ಯೆ ನಡೆಸಿದ ಸಂಘಟನೆ ಜೊತೆ ತಾನು ಯಾವುದೇ ಸಂಬಂಧ ಹೊಂದಿಲ್ಲ ಎಂದು ಹೇಳಿದೆ.

# ನಗರದಲ್ಲಿ ಇಂದು 'ಹಲೋ ಹೈದ್ರಾಬಾದಿ' ನಾಟಕ ಪ್ರದರ್ಶನ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಶ್ರೀ ಜಯಲಕ್ಷ್ಮಿ ನಾಟಕ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಶ್ರೀಶೈಲ ಮಲ್ಲಿಕಾರ್ಜುನ ವಿವಿಧ ನಾಟಕ ಕಲಾವಿದರ ಸಂಘದವರಿಂದ 'ಹಲೋ ಹೈದ್ರಾಬಾದಿ' ನಾಟಕದ ಉದ್ಘಾಟನಾ ಸಮಾರಂಭವನ್ನು ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ 6 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು. ಶಾಸಕ ಎಸ್.ಎ. ರವೀಂದ್ರನಾಥ್ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಡಾ. ಎಂ. ಮಾರ್ತಾಂಡಪ್ಪ ವಹಿಸುವರು.

ಮುಖ್ಯ ಅತಿಥಿಗಳಾಗಿ ಮಲ್ಲಿಕಾರ್ಜುನ ಮಠದ, ಬಿ.ಎನ್. ಗಿರೀಶ್, ರವಿಚಂದ್ರ, ರವೀಂದ್ರ ಅರಳಗುಪ್ಪಿ, ಚಿಂದೋಡಿ ಶಂಭುಲಿಂಗಪ್ಪ, ಮಲ್ಲಿಕಾರ್ಜುನ ಕಡಕೋಳ, ಬಸವರಾಜ ಐರಣಿ, ಎನ್.ಎಸ್. ರಾಜು, ಬೇಲೂರು ಅಂಜಪ್ಪ ನೀಲಗುಂದ, ಸತೀಶ್ ಪೂಜಾರ್, ಎಂ.ಬಿ. ಯಶವಂತಗೌಡ್ರು, ಹೆಚ್.ಟಿ. ಪರಶುರಾಮಪ್ಪ, ನಾಗರಾಜ್ ಕುಡುಪಲಿ, ಶಶಿಧರ ಪೂಜಾರ್, ಆರ್.ವಿ. ಬಕ್ಕೇಶಪ್ಪ (ಅಡಿಕೆ), ಪ್ರವೀಣ್‌ಕುಮಾರ್ ಜೈನ್, ಗೋಣಿ ಬಸಪ್ಪ ಆಗಮಿಸುವರು.

ಕಾರ್ಯಕ್ರಮದಲ್ಲಿ ಮಂಜುನಾಥ ಜಾಲಿಹಾಳ, ಎಸ್. ಲಿಂಗರಾಜ ಗೌಡ್ರು, ಕೆ.ಎಂ. ಬಸವರಾಜ, ಶ್ರೀಮತಿ ಆಶಾ ನಾವಡ, ವೀರಣ್ಣ, ಡಿ.ಜಿ. ನಾಗರಾಜಪ್ಪ, ಎಸ್.ಎಂ. ರಾಜ, ಹೆಚ್.ಎಸ್. ಬಸವರಾಜಪ್ಪ, ಕೆ.ಎಂ. ಚನ್ನಯ್ಯಸ್ವಾಮಿ, ದಾದು ಟ್ರ್ಯಾಕ್ಟರ್ ಗ್ಯಾರೇಜ್, ನಾಗರಾಜ್ ನಾಕೋಡ, ಕೆ.ಪಿ. ರುದ್ರೇಶ್ ಕೈದಾಳೆ ಅವರುಗಳನ್ನು ಸನ್ಮಾನಿಸಲಾಗುವುದು.

# ರೈತರ ಹತ್ಯೆ, ಪ್ರಿಯಾಂಕ ಬಂಧಿಸಿರುವ ಘಟನೆ ಖಂಡನೀಯ



ಹರಪನಹಳ್ಳಿ, ಅ.15- ಉತ್ತರ ಪ್ರದೇಶದ ಲಖೀಂಪುರದಲ್ಲಿ ಹೋರಾಟ ನಿರತ ರೈತರ ಮೇಲೆ ಕಾರು ಚಲಾಯಿಸಿ ರೈತರನ್ನು ಹತ್ಯೆ ಮಾಡಿರುವ ಘಟನೆ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ ಗಾಂಧಿ ಅವರನ್ನು ಅಕ್ರಮವಾಗಿ ಬಂಧಿಸಿರುವ ಪೊಲೀಸರನ್ನು ಅಮಾನತ್ತುಗೊಳಿಸಬೇಕು ಎಂದು ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಎಂ.ಪಿ.ವೀಣಾ ಮಹಂತೇಶ್ ಒತ್ತಾಯಿಸಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿ, ಹೋರಾಟ ನಿರತ ರೈತ ಮೇಲೆ ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶೀಶ್ ಮಿಶ್ರಾ ಅವರು ಕಾರ್ ಚಲಾಯಿಸಿ 6 ಜನ ರೈತರನ್ನು ಹತ್ಯೆ ಮಾಡಿದ್ದಾರೆ. ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಲು ಆಗಮಿಸಿದ್ದ ಪ್ರಿಯಾಂಕ ಗಾಂಧಿ ಅವರನ್ನೂ ಬಂಧಿಸಲಾಗಿತ್ತು. ಸರ್ಕಾರ ಬ್ರಿಟಿಷರಿಗಿಂತ ಹೀನಾಯವಾಗಿ ನಡೆದುಕೊಳ್ಳುತ್ತಿದೆ ಎಂದು ಅವರು ಕಿಡಿ ಕಾರಿದ್ದಾರೆ.

ರೈತರಿಗೆ ಸಾಂತ್ವನ ಹೇಳುವುದು ಪ್ರತಿಯೊಬ್ಬರ ಹಕ್ಕಾಗಿದೆ. ಆ ಪ್ರಕಾರ ಪ್ರಿಯಾಂಕ ಗಾಂಧಿ ರೈತರಿಗೆ ಸಾಂತ್ವನ ಹೇಳಲು ಹೋದರೆ ಅವರನ್ನು ಬಂಧಿಸುವುದು ಹೇಡಿ ಕೃತ್ಯ, ಸಾಂತ್ವನ ಹೇಳುವುದು ಭಾರತೀಯ ಸಂಸ್ಕೃತಿಯ ಭಾಗವೋ? ಅಲ್ಲವೋ? ಎಂಬ ಪ್ರಶ್ನೆಯೂ ಈಗ ಮೂಡಿದೆ ಎಂದವರು ಹೇಳಿದ್ದಾರೆ.

# ನಗರದಲ್ಲಿ ಇಂದು ವಿಷ್ಣು ಸಹಸ್ರನಾಮ

ಜಯದೇವ ವೃತ್ತದ ಬಳಿಯ ಶ್ರೀ ಶಂಕರ ಮಠದಲ್ಲಿ ಇಂದು ಬೆಳಿಗ್ಗೆ 8.30 ಕ್ಕೆ ವಿಷ್ಣು ಸಹಸ್ರನಾಮ ಹೋಮ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ, ಉಪಹಾರ ನಡೆಯುವುದು. ನಾಳೆ ಭಾನುವಾರ ಬೆಳಿಗ್ಗೆ 7 ಗಂಟೆಗೆ ರುದ್ರಾಭಿಷೇಕ, ರುದ್ರಹೋಮ, ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ಅಮ್ಮನವರಿಗೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು.

# ಕಲ್ಯಾಣ ಮಂಟಪ ಸರ್ವ ಜನಾಂಗದ ಸದ್ಬಳಕೆಗೆ ಸಮರ್ಪಣೆ

**ಡಿಸಿಎಂ ಟೌನ್‌ಶಿಪ್‌ನಲ್ಲಿ ವಾಸವಿ ಸೇವಾ ಸಂಘದ ನೂತನ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಭೂಮಿ ಪೂಜೆ ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ರಾಜನಹಳ್ಳಿ ರಮಾನಂದ್**



ದಾವಣಗೆರೆ, ಅ.15- ವಾಸವಿ ಸೇವಾ ಸಂಘದಿಂದ ಡಿಸಿಎಂ ಟೌನ್ ಶಿಪ್ ನಲ್ಲಿ ನಿರ್ಮಾಣವಾಗುತ್ತಿರುವ ಕಲ್ಯಾಣ ಮಂಟಪವನ್ನು ಸರ್ವ ಜನಾಂಗದ ಸದ್ಬಳಕೆಗೆ ಸಮರ್ಪಣೆ ಮಾಡುವುದಾಗಿ ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷ ರಾಜನಹಳ್ಳಿ ರಮಾನಂದ್ ತಿಳಿಸಿದರು.

ನಗರದ ಡಿಸಿಎಂ ಟೌನ್‌ಶಿಪ್‌ನಲ್ಲಿ ಇಂದು ಏರ್ಪಾಡಾಗಿದ್ದ ನೂತನ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ ನಂತರ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಕಲ್ಯಾಣ ಮಂಟಪ ಕೇವಲ ವಾಸವಿ ಸಮಾಜಕ್ಕೆ ಮಾತ್ರ ಸೀಮಿತವಲ್ಲ, ಎಲ್ಲ ವರ್ಗದ ಜನರು ಇದರ ಸದುಪಯೋಗಪಡೆದುಕೊಳ್ಳಬಹುದು. ಕುಂದವಾಡ ಕೆರೆ ಬಳಿ, ಹಳೇ ಪೇಟೆ ಮತ್ತು ಡಿಸಿಎಂ ಬಡಾವಣೆ ಈ 3 ಭಾಗಗಳಲ್ಲಿನ ಕಲ್ಯಾಣ ಮಂಟಪಗಳನ್ನು ಸರ್ವ ಜನಾಂಗವೂ ಸಹ ಸದ್ಬಳಕೆ ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿದರು.

ಮೇಯರ್ ಎಸ್.ಟಿ. ವೀರೇಶ್ ಮಾತನಾಡಿ, ಭವಿಷ್ಯದ ಪೀಳಿಗೆಗೆ ಉತ್ತಮ ಸಂಸ್ಕೃತಿ ಮತ್ತು ಸಾಮಾಜಿಕ ರೀತಿ, ನೀತಿಗಳನ್ನು ಕೊಂಡೊಯ್ಯುವ ಹೆಗ್ಗಳಿಕೆ ವಾಸವಿ ಸಮಾಜಕ್ಕೆ ಇದೆ ಎಂದು ಪ್ರಶಂಸಿಸಿದರು.

ದೂಡಾ ಅಧ್ಯಕ್ಷ ದೇವರಮನಿ ಶಿವಕುಮಾರ್ ಮಾತನಾಡಿ, ಡಿಸಿಎಂ ಬಡಾವಣೆಯಲ್ಲಿನ ರಸ್ತೆ, ಚರಂಡಿ, ವಿದ್ಯುತ್ ಸಂಪರ್ಕ ಸೇರಿದಂತೆ, ಅಗತ್ಯ ಮೂಲಭೂತ ಸೌಕರ್ಯಗಳ ಮುಖೇನ ಅಭಿವೃದ್ಧಿಗೆ ಪಾಲಿಕೆ ಮೇಯರ್ ಮೂಲಕ ಮನವಿ ಸಲ್ಲಿಸಿದರೆ ಕೆಲಸ ಮಾಡಿಕೊಡುವುದಾಗಿ ಆಶ್ವಾಸನೆ ನೀಡಿದರು.

ಡಿಸಿಎಂ ಟೌನ್ ಶಿಪ್ ವಾಸವಿ ಸೇವಾ ಸಂಘದ ಅಧ್ಯಕ್ಷ ಬಿ.ಎಸ್. ರಾಮಶ್ರೇಷ್ಠಿ ಅಧ್ಯಕ್ಷತೆ ವಹಿಸಿದ್ದರು.

ಕನ್ಯಕಾ ಪರಮೇಶ್ವರಿ ದೇವಸ್ಥಾನದ ಆಜೀವ ಗೌರವಾಧ್ಯಕ್ಷ ಆರ್.ಎಸ್. ನಾರಾಯಣಸ್ವಾಮಿ, ಡಾ. ಬಿ.ಎಸ್. ನಾಗಪ್ರಕಾಶ್ ಅವರ ಪುತ್ರ ಡಾ. ಅಭಿಷೇಕ್, ವರ್ತಕ ಹೆಚ್.ಆರ್. ವೇಣುಗೋಪಾಲ್ ಶ್ರೇಷ್ಠಿ, ವಾಸವಿ ಸೇವಾ ಸಂಘದ ಉಪಾಧ್ಯಕ್ಷ ಬಿ.ವಿ. ಗಂಗಪ್ಪ ಶ್ರೇಷ್ಠಿ, ಬಿ.ಎಲ್. ಶೇಷಪ್ಪ ಶ್ರೇಷ್ಠಿ, ಹೆಚ್. ಪ್ರಹ್ಲಾದ್ ಶ್ರೇಷ್ಠಿ, ಕೆ. ಎಸ್. ರುದ್ರಶ್ರೇಷ್ಠಿ, ಬಿ.ಹೆಚ್. ಕೃಷ್ಣಮೂರ್ತಿ ಶ್ರೇಷ್ಠಿ, ಕೆ. ಎಲ್. ರವೀಂದ್ರನಾಥ ಶ್ರೇಷ್ಠಿ, ಎಸ್. ನಾಗರಾಜ ಶ್ರೇಷ್ಠಿ, ಹೆಚ್.ಬಿ. ಮಾರುತಿ, ಹೆಚ್.ಎನ್. ರತ್ನಕುಮಾರ ಶ್ರೇಷ್ಠಿ, ವೈ.ಯು. ಪ್ರಸನ್ನಕುಮಾರ್, ಕೆ.ಎಸ್. ನಾಗರಾಜ್, ಬಿ. ಹೆಚ್. ಭಾರ್ಗವರಾಮ, ಟಿ.ಎಸ್. ಕಿರಣ್ ಸೇರಿದಂತೆ ಇತರರು ಇದ್ದರು. ಸಂಘದ ನಿರ್ದೇಶಕ ಹೆಚ್. ವೆಂಕಟೇಶ್ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಬಿ.ಹೆಚ್. ಅಶೋಕ್ ನಿರೂಪಿಸಿದರು.

# ಮಾನಸಿಕ ರೋಗಿಗಳನ್ನು ಕಳಂಕ ಮುಕ್ತರನ್ನಾಗಿಸಲು ಕರೆ

**ಎಸ್.ಎಸ್. ಹೈಟೆಕ್ ಕಾಲೇಜಿನ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ಬಿ.ಎಸ್.ಪ್ರಸಾದ್**



ದಾವಣಗೆರೆ, ಅ.15- ಮಾನಸಿಕ ರೋಗವನ್ನು ಇನ್ನಿತರೆ ದೈಹಿಕ ರೋಗದಂತೆಯೇ ಸಮನಾಗಿ ಚಿಕಿತ್ಸೆ ನೀಡಿ, ಮಾನಸಿಕ ರೋಗಿಗಳನ್ನು ಕಳಂಕ ಮುಕ್ತರನ್ನಾಗಿಸುವಂತೆ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಬಿ.ಎಸ್. ಪ್ರಸಾದ್ ಮುಂದಿನ ಪೀಳಿಗೆಯ ವೈದ್ಯಕೀಯ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಎಸ್.ಎಸ್. ವೈದ್ಯಕೀಯ ಮಹಾ ವಿದ್ಯಾಲಯದ ಸಭಾಂಗಣದಲ್ಲಿ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾನಸಿಕ ಆರೋಗ್ಯದ ಮಹತ್ವ ಹಾಗೂ ಪ್ರಸ್ತುತ ಕೊರೊನಾ ಮತ್ತು ಲಾಕ್‌ಡೌನ್ ಸಂದರ್ಭದಲ್ಲಿ ಮಾನಸಿಕ ಸ್ವಾಸ್ಥ್ಯಕ್ಕಿರುವ ಸವಾಲುಗಳ ಬಗ್ಗೆ ತಿಳಿಸಿದರು.

ಅಭಿಯೋಜನಾ ಇಲಾಖೆ ಸಹಾಯಕ ನಿರ್ದೇಶಕರಾದ ಕೆ.ಜಿ. ಕಲ್ಪನಾ ಮಾತನಾಡಿ, ಕುಟುಂಬದಲ್ಲಿರುವ ಮಾನಸಿಕ ಅಸ್ವಸ್ಥರನ್ನು ಕಡೆಗಣಿಸದಿರುವಂತೆ ಹಿತ ನುಡಿದ ಅವರು, ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಪಟ್ಟ ವಿವಿಧ ಕಾಯ್ದೆಗಳ ಮಹತ್ವದ ಬಗ್ಗೆ ಅರಿವು ಮೂಡಿಸಿದರು.

ದಯಾಮರಣದ ಸಾಧಕ ಬಾಧಕಗಳನ್ನು ವಿವರಿಸಿದ ಅವರು, ತುರ್ತು ಪ್ರಕರಣದಲ್ಲಿ ವೈದ್ಯರು ಹಿಂಜರಿಕೆಯಿಲ್ಲದೆ ರೋಗಿಯ ಒಳಿತನ್ನು ಗಮನದಲ್ಲಿಟ್ಟುಕೊಂಡು ಚಿಕಿತ್ಸೆ ನೀಡುವಂತೆ ಮನವಿ ಮಾಡಿದರು.

ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಉಪ ಪ್ರಾಂಶುಪಾಲರಾದ ಡಾ. ಶಶಿಕಲಾ ಪಿ. ಕೃಷ್ಣಮೂರ್ತಿ, ಡಾ. ಎ. ಅರುಣ್ ಕುಮಾರ್, ವಿವಿಧ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಮನೋವೈದ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಎನ್. ಮೃತ್ಯುಂಜಯ ಸ್ವಾಗತಿಸಿದರು. ಕ್ಲಿನಿಕಲ್ ಸೈಕಾಲಜಿಸ್ಟ್ ಡಾ. ಹೆಚ್. ಆಶಾ ಅತಿಥಿಗಳನ್ನು ಪರಿಚಯಿಸಿದರು.

# ಹಸಿವಿನ ಸೂಚ್ಯಂಕದಲ್ಲಿ ಕುಸಿತ

**(1ನೇ ಪುಟದಿಂದ)** ವೈಜ್ಞಾನಿಕವಾಗಿ ವರದಿ ರೂಪಿಸಬೇಕಾದರೆ ತೂಕ ಹಾಗೂ ಎತ್ತರವನ್ನು ಅಳೆಯಬೇಕಾಗುತ್ತದೆ ಎಂದು ಸಚಿವಾಲಯ ಹೇಳಿದೆ.

ಸರ್ಕಾರ ಹಾಗೂ ಇತರೆ ಮೂಲಗಳಿಂದ ಆಹಾರ ಪಡೆಯಲಾಗಿದೆಯೇ ಎಂಬ ಬಗ್ಗೆ ಅಭಿಪ್ರಾಯ ಸಂಗ್ರಹದಲ್ಲಿ ಒಂದು ಪ್ರಶ್ನೆಯನ್ನೂ ಕೇಳಿಲ್ಲ. ಭಾರತ ಹಾಗೂ ಇತರೆ ದೇಶಗಳಿಗೆ ಸಂಬಂಧಿಸಿದಂತೆ ಈ ಅಭಿಪ್ರಾಯ ಸಂಗ್ರಹವೂ ಅನುಮಾನಾಸ್ಪದವಾಗಿದೆ ಎಂದು ಸಚಿವಾಲಯ ಹೇಳಿದೆ.

# ಕೊಮಾರನಹಳ್ಳಿಯಲ್ಲಿ ರಥೋತ್ಸವ



ಮಲೇಬೆನ್ನೂರು, ಅ.15- ಸಮೀಪದ ಕೊಮಾರನಹಳ್ಳಿ ಗ್ರಾಮದಲ್ಲಿ ವಿಜಯದಶಮಿ ಹಬ್ಬದ ಅಂಗವಾಗಿ ಶುಕ್ರವಾರ ಮಧ್ಯಾಹ್ನ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಬ್ರಹ್ಮ ರಥೋತ್ಸವವು ಸರಳವಾಗಿ, ಸಂಭ್ರಮದಿಂದ ಜರುಗಿತು. ರಥೋತ್ಸವದ ನಂತರ ಶ್ರೀರಂಗನಾಥ ಸ್ವಾಮಿಯ ಸಮ್ಮುಖದಲ್ಲಿ ಎಲ್ಲರಿಗೂ ದೇವಸ್ಥಾನದ ಅರ್ಚಕರು ಬನ್ನಿ ಪತ್ರೆ ವಿತರಣೆ ಮಾಡಿದರು.

# ರಸಗೊಬ್ಬರ ತಯಾರಿಕ ಘಟಕ ಸ್ಥಾಪನೆ

**(1ನೇ ಪುಟದಿಂದ)** ಪಾಲಿಕೆಗೆ ರಾಜ್ಯ ಸ್ಥಳೀಯ ಸಂಸ್ಥೆಗಳಿಗೆ ನೀಡುವ ಪ್ರಶಸ್ತಿ ನೀಡಿ ಗೌರವಿಸಿದೆ.

ಬಡಾವಣೆಯ ಪಾಲಿಕೆಯ ಸದಸ್ಯ ಗಡಿಗುಡಾಳ್ ಮಂಜುನಾಥ್ ಮತ್ತು ಆರೋಗ್ಯ ನಿರೀಕ್ಷಕ ಮಾಲತೇಶ್ ಅವದರ ಪ್ರಯತ್ನದಿಂದ ಇಲ್ಲಿನ ಬೀದಿಗಳಲ್ಲಿನ ಒಣ ಕಸವನ್ನು ತೆಗೆದು ಅದರಿಂದ ಉತ್ತಮವಾದ ರಸಗೊಬ್ಬರ ತಯಾರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ.

ಈ ಸಾಧನೆಗೆ ಕಾರಣರಾದ ಪಾಲಿಕೆ ಸದಸ್ಯ ಮಂಜುನಾಥ್ ಹಾಗೂ ಮಾಲತೇಶ್ ಅವರನ್ನು ಪಾಲಿಕೆ ವಿರೋಧ ಪಕ್ಷದ ನಾಯಕ ಎ.ನಾಗರಾಜ್, ಪಾಲಿಕೆ ಸದಸ್ಯ ಕೆ. ಚಮನ್ ಸಾಬ್ ಹಾಗೂ ಬಡಾವಣೆಯ ಮುಖಂಡರುಗಳು ಸೇರಿ ಸನ್ಮಾನಿಸಿ, ಗೌರವಿಸಿದರು.

# ಮಲ್ಲನಾಯ್ಕನಹಳ್ಳಿಯಲ್ಲಿ ಇಂದು ಗ್ರಾಮ ವಾಸ್ತವ್ಯ

ಮಲೇಬೆನ್ನೂರು ಸಮೀಪದ ಹರಳಹಳ್ಳಿ ಗ್ರಾ.ಪಂ. ವ್ಯಾಪ್ತಿಯ ಮಲ್ಲನಾಯ್ಕನಹಳ್ಳಿ ಗ್ರಾಮದಲ್ಲಿ ಇಂದು ಹರಿಹರ ತಾಲ್ಲೂಕು ಆಡಳಿತದ ವತಿಯಿಂದ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಶಾಸಕ ಎಸ್. ರಾಮಪ್ಪ ಅವರ ಸಮ್ಮುಖದಲ್ಲಿ ಮತ್ತು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

# ಹರಪನಹಳ್ಳಿ : ಪಡಿತರ ಚೀಟಿಗಳಿಗೆ ಕೆವೈಸಿ ಮಾಡಿಸಲು ಅ. 31 ಕಡೆ ದಿನ

ಹರಪನಹಳ್ಳಿ, ಅ.15- ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಅಂತ್ಯೋದಯ ಅನ್ನ ಮತ್ತು ಆದ್ಯತಾ (ಬಿ.ಪಿ.ಎಲ್) ಪಡಿತರ ಚೀಟಿಗಳಲ್ಲಿರುವ ಪ್ರತಿಯೊಬ್ಬ ಸದಸ್ಯರುಗಳು ಇ-ಕೆವೈಸಿ ಮಾಡಿಕೊಳ್ಳಲು ನ್ಯಾಯಬೆಲೆ ಅಂಗಡಿಗಳಲ್ಲಿ ಮತ್ತೆ ಅವಕಾಶ ನೀಡಲಾಗಿದೆ.

ಇ-ಕೆವೈಸಿ ಕಾರ್ಯವು ಇದೇ ದಿನಾಂಕ 31ಕ್ಕೆ ಮುಕ್ತಾಯವಾಗಲಿದ್ದು, ಈ ಅವಧಿಯೊಳಗೆ ಪಡಿತರ ಪಡೆಯುವ ಪ್ರತಿಯೊಬ್ಬ ಸದಸ್ಯರೂ ನ್ಯಾಯಬೆಲೆ ಅಂಗಡಿಗೆ ಹೋಗಿ ತಮ್ಮ ಬೆರಳಚ್ಚು ನೀಡಿ, ಹೆಸರು ಮರು ನೋಂದಣಿ ಮಾಡಿಸಬೇಕು. ಇ-ಕೆವೈಸಿಗೆ ಯಾವುದೇ ಹಣ ನೀಡುವಂತಿಲ್ಲ. ಕೋವಿಡ್-19 ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ತಹಶೀಲ್ದಾರ್ ಎಲ್. ಎಂ.ನಂದೀಶ್ ತಿಳಿಸಿದ್ದಾರೆ.

ಎಲ್ಲಾ ಅಂಗಡಿದಾರರು ಪಡಿತರವನ್ನು ಪ್ರತಿ ಮಾಹೆ 1 ರಿಂದಲೇ ವಿತರಣೆ ಪ್ರಾರಂಭಿಸತಕ್ಕದ್ದು ಹಾಗೂ ಮಾಹೆಯ ಕೊನೆಯ ದಿನದವರೆಗೂ ಪಡಿತರ ವಿತರಿಸತಕ್ಕದ್ದು ಹಾಗೂ ಕಾರ್ಡುದಾರರು ನ್ಯಾಯಬೆಲೆ ಅಂಗಡಿಗೆ ಹೋಗಿ ಪಡಿತರ ಪಡೆಯುವುದು. ಇ-ಕೆವೈಸಿ ಆಗದ ಫಲಾನುಭವಿಗಳ ಪಟ್ಟಿಯನ್ನು ನ್ಯಾಯಬೆಲೆ ಅಂಗಡಿಯ ಮುಂದೆ ಕಡ್ಡಾಯವಾಗಿ ಪ್ರದರ್ಶಿಸಬೇಕು. ಇ-ಕೆವೈಸಿ ಮಾಡಿಸಿಕೊಳ್ಳದ ಕಾರ್ಡುದಾರರಿಗೆ ಅಕ್ಟೋಬರ್ 25 ರೊಳಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡುವಂತೆ ಇ-ಕೆವೈಸಿ ಸಂಗ್ರಹಣೆಗೆ ಸಂಬಂಧಿಸಿದಂತೆ ನ್ಯಾಯಬೆಲೆ ಅಂಗಡಿಕಾರರಿಗೆ ಕ್ರಮ ಜರುಗಿಸಲು ತಿಳಿಸಲಾಗಿದೆ.

# ವಿದ್ಯಾನಗರದ ದೇವಸ್ಥಾನದಲ್ಲಿ ನವರಾತ್ರಿ ಆಚರಣೆ



ದಾವಣಗೆರೆ, ಅ.15- ವಿದ್ಯಾನಗರದ ಶ್ರೀ ಈಶ್ವರ - ಪಾರ್ವತಿ - ಗಣಪತಿ ದೇವಸ್ಥಾನದಲ್ಲಿ ನವರಾತ್ರಿಯ 9 ದಿನಗಳ ಕಾಲ ಮಹಿಳಾ ಮಂಡಳಿ ಸದಸ್ಯರು ಲಲಿತ ಸಹಸ್ರನಾಮ, ದೇವಿ ಪಾರಾಯಣ ಮಾಡುವುದರ ಮೂಲಕ ತಮ್ಮ ಭಕ್ತಿಯ ಪರಾಕಾಷ್ಠೆಯನ್ನು ಮೆರೆದು ನವರಾತ್ರಿಗೆ ಮೆರಗು ತಂದರು. ಪ್ರತಿದಿನವೂ ಶ್ರೀ ದೇವಿಗೆ ಪ್ರಿಯವಾದ ಬಣ್ಣದ ಸೀರೆಯುಟ್ಟಿದ್ದರು.

# ನಗರದಲ್ಲಿ ಇಂದು ಕೋವಿಡ್ ಲಸಿಕೆ

ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ ನಲ್ಲಿನ ಬಿಎಸ್‌ಎನ್‌ಎಲ್ ಕಚೇರಿ ಬಳಿಯ ಭಾರತೀಯ ರೆಡ್ ಕ್ರಾಸ್ ಭವನದಲ್ಲಿ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ವತಿಯಿಂದ ಇಂದು ಬೆಳಿಗ್ಗೆ 11ಕ್ಕೆ 18 ವರ್ಷ ಮೇಲ್ಪಟ್ಟವರಿಗೆ ಕೋವಿಶೀಲ್ಡ್ ನ ಮೊದಲ ಮತ್ತು ಎರಡನೇ ಲಸಿಕೆ ನೀಡಲಾಗುವುದು. ಅಂತೆಯೇ ಪ್ರತಿ ಶನಿವಾರವೂ ಸಹ ಲಸಿಕಾ ಅಭಿಯಾನವನ್ನು ನಡೆಸುವುದಾಗಿ ಸೊಸೈಟಿಯ ಉಪಾಧ್ಯಕ್ಷ ಡಿ.ಎಸ್. ಸಿದ್ದಣ್ಣ ತಿಳಿಸಿದ್ದಾರೆ.

# ಜಿಲ್ಲೆಗೆ ಇಂದು ಕಂದಾಯ ಸಚಿವ ಅಶೋಕ್



ಕಂದಾಯ ಸಚಿವ ಆರ್.ಅಶೋಕ್ ಅವರು ಇಂದು ಮತ್ತು ನಾಳೆ ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಬೆಳಿಗ್ಗೆ 8.45 ಕ್ಕೆ ದಾವಣಗೆರೆಯಿಂದ ಹೊರಡುವ ಸಚಿವರು, ಬೆಳಿಗ್ಗೆ 10 ಗಂಟೆಗೆ ನ್ಯಾಮತಿ ತಾಲ್ಲೂಕಿನ ಸುರಹೊನ್ನೆ ಗ್ರಾಮದ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜು ಆವರಣದಲ್ಲಿ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮಕ್ಕೆ ಚಾಲನೆ ನೀಡುವರು.

ಸಂಜೆ 4 ಗಂಟೆಗೆ ಹೊನ್ನಾಳಿ ತಾಲ್ಲೂಕಿನ ಕುಂದೂರಿಗೆ ಆಗಮಿಸುವರು. ಬಳಿಕ ಗ್ರಾಮದ ಕಸ್ತೂರಬಾ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿರುವ ಫಲಾನುಭವಿಗಳಿಗೆ ವಿವಿಧ ಸರ್ಕಾರಿ ಸೌಲಭ್ಯಗಳ ವಿತರಣೆ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ, ಉದ್ಘಾಟನೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವರು.

ನಾಳೆ ಭಾನುವಾರ ಬೆಳಗ್ಗೆ 10 ಗಂಟೆಗೆ ಕುಂದೂರು ಗ್ರಾಮದಿಂದ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

# ನಗರದ ಸ್ವಚ್ಛತೆಗೆ ಶ್ರಮಿಸುವ ಪೌರ ಕಾರ್ಮಿಕರಿಗ ಕಂಚಿನ ಕಲಶ



ದಾವಣಗೆರೆ, ಅ.15- ನಗರದ 24 ನೇ ವಾರ್ಡಿನಲ್ಲಿ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ಅವರು ದಸರಾ ಹಬ್ಬದ ಪ್ರಯುಕ್ತ ನಗರವನ್ನು ಸ್ವಚ್ಛವಾಗಿಡುವಲ್ಲಿ ಶ್ರಮಿಸುತ್ತಿರುವ ಮಹಿಳಾ ಪೌರ ಕಾರ್ಮಿಕರಿಗೆ ಮಹಾಪೌರರಾದ ಎಸ್.ಟಿ. ವೀರೇಶ್ ಕಂಚಿನ ಕಲಶಗಳನ್ನು ಉಡುಗೊರೆಯಾಗಿ ನೀಡಿದರು. ಇದೇ ಸಂದರ್ಭದಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸುವ ಪೌರ ಕಾರ್ಮಿಕರಿಗೆ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಉದಯ್ ಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಸಾಮೂಹಿಕ ವಿವಾಹ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಲ್ಲಿ ಇಂದು ಕಳಸದ ಪೂಜೆ, ನಂತರ ಸಾಮೂಹಿಕ ವಿವಾಹ ನಡೆಯುವುದು.

ಬೆಳಿಗ್ಗೆ 11.30 ಕ್ಕೆ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಡಾ. ಶಾಮನೂರು ಶಿವಶಂಕರಪ್ಪ ಅವರ ಸಮ್ಮುಖದಲ್ಲಿ ಉಚಿತ ಸಾಮೂಹಿಕ ವಿವಾಹ ನಡೆಯುವುದು.

# ನ.21ಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆ

ಬೆಂಗಳೂರು, ಅ.15- ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಬರುವ ನವೆಂಬರ್ 21 ರಂದು ಚುನಾವಣೆ ನಡೆಯಲಿದೆ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತಿನ ಚುನಾವಣೆ ಕಳೆದ ಮೇ 9 ರಂದು ಈ ಹಿಂದೆ ನಿಗದಿಯಾಗಿತ್ತು. ನಾಮಪತ್ರ ಪರಿಶೀಲನೆ ಸೇರಿದಂತೆ ವಿವಿಧ ಪ್ರಕ್ರಿಯೆಗಳು ಪೂರ್ಣಗೊಂಡು, ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಅಂತಿಮವಾಗಿ 21 ಮಂದಿ ಸ್ಪರ್ಧೆಯಲ್ಲಿದ್ದರು. ಮಾರ್ಚ್ ಮೂರನೇ ವಾರದ ಬಳಿಕ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದು, ಏಪ್ರಿಲ್ ತಿಂಗಳಲ್ಲಿ ಗರಿಷ್ಟ ಸಂಖ್ಯೆಗೆ ತಲುಪಿದ ಕಾರಣ ಚುನಾವಣೆಯನ್ನು ಸರ್ಕಾರ ಮುಂದೂಡಿತ್ತು.

ಇದೀಗ ಸರ್ಕಾರವು ಚುನಾವಣೆ ನಡೆಸಲು ಅನುಮತಿ ನೀಡಿದೆ. ಹೀಗಾಗಿ, ಸ್ಥಗಿತಗೊಂಡ ಚುನಾವಣೆ ಪ್ರಕ್ರಿಯೆಯನ್ನು ಯಥಾವತ್ತಾಗಿ ನಡೆಸಲು ಕೇಂದ್ರ ಚುನಾವಣಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ ಕ್ರಮಕೈಗೊಂಡಿದ್ದಾರೆ.

**ನ.24 ಕ್ಕೆ ಫಲಿತಾಂಶ :** ಈ ಬಾರಿ ಚುನಾವಣೆಯಲ್ಲಿ 3,10,109 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ನವೆಂಬರ್ 21 ರಂದು ಬೆಳಿಗ್ಗೆ 8 ರಿಂದ ಸಂಜೆ 4 ರವರೆಗೆ ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ 27 ವಿಧಾನಸಭೆ ಕ್ಷೇತ್ರಗಳ ಗುರುತಿಸಲಾದ ಮತಗಟ್ಟೆಗಳಲ್ಲಿ ಮತದಾನ ನಡೆಯಲಿದೆ.

ಜಿಲ್ಲಾ ಘಟಕಗಳ ಅಧ್ಯಕ್ಷರ ಫಲಿತಾಂಶ ಅದೇ ದಿನ ಘೋಷಣೆಯಾಗಲಿದೆ. ನವೆಂಬರ್ 24 ರಂದು ಪರಿಷತ್ತಿನ ಚುನಾವಣಾಧಿಕಾರಿಯ ಕೇಂದ್ರ ಕಚೇರಿಯಲ್ಲಿ ಗಡಿನಾಡ ಘಟಕಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಅಂಚೆ ಮತ ಪತ್ರಗಳನ್ನು ಎಣಿಕೆ ಮಾಡಿ, ಫಲಿತಾಂಶ ಘೋಷಿಸಲಾಗುತ್ತದೆ. ರಾಜ್ಯಾಧ್ಯಕ್ಷರ ಆಯ್ಕೆಗೆ ಎಲ್ಲಾ ಜಿಲ್ಲೆಗಳಿಂದ ಬಂದ ಮತಗಳು ಹಾಗೂ ಅಂಚೆ ಮತಗಳನ್ನು ಕ್ರೋಢೀಕರಿಸಿ, ಅದೇ ದಿನ ಫಲಿತಾಂಶವನ್ನು ಘೋಷಿಸಲಾಗುತ್ತದೆ ಎಂದು ಗಂಗಾಧರ ಸ್ವಾಮಿ ವಿವರಿಸಿದ್ದಾರೆ.

## ಚುನಾವಣೆ ಕಣದಲ್ಲಿ ಇರುವವರು

ರಾಜ್ಯ ಘಟಕ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು : 21
ಜಿಲ್ಲಾ ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು : 223
ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವವರು : 16

## ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವವರು

ಮ.ಚಿ.ಕೃಷ್ಣ, ವ.ಚ.ಚನ್ನೇಗೌಡ, ಮಹೇಶ್ ಜೋಶಿ, ಸಂಗಮೇಶ್ ಬಾದವಾಡಗಿ, ಸಿ.ಕೆ.ರಾಮೇಗೌಡ, ರಾಜಶೇಖರ ಮುಲಾಲಿ, ಬಸವರಾಜ ಶಿ.ಹಳ್ಳೂರ, ಬಾಡದ ಬದ್ರೀನಾಥ್, ಶಿವರಾಜ ಪಾಟೀಲ್, ಸರಸ್ವತಿ ಶಿವಪ್ಪ ಚಿಮ್ಮಲಗಿ, ವೈ.ರೇಣುಕಾ, ಶೇಖರಗೌಡ ಮಾಲಿ ಪಾಟೀಲ, ಕೆ.ರತ್ನಾಕರ ಶೆಟ್ಟಿ, ವಾಲ್ಮೀಕಪ್ಪ ಹ. ಯಕ್ಕರನಾಳ, ಮಾಯಣ್ಣ, ಪ್ರಮೋದ್ ಹಳಕಟ್ಟಿ, ಶಿವಪ್ಪ ಮಲ್ಲಪ್ಪ ಬಾಗಲ, ಕೆ.ರವಿ ಅಂಬೇಕರ, ನ.ಶ್ರೀ ಸುಧೀಂದ್ರ ರಾವ್, ಶರಣಬಸಪ್ಪ ಕಲ್ಲಪ್ಪ ದಾನಕ್ಕಿ ಹಾಗೂ ಶಿವರುದ್ರಸ್ವಾಮಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ.

# ರಾಷ್ಟ್ರೀಯ ಶಿಕ್ಷಣ ನೀತಿ-2020 ಹಿಂಪಡೆಯಲು ಆಗ್ರಹ

ದಾವಣಗೆರೆ, ಅ.15- ರಾಷ್ಟ್ರೀಯ ಶಿಕ್ಷಣ ನೀತಿ-2020ನ್ನು ರಾಜ್ಯದ ಮೇಲೆ ರಾಜ್ಯ ಸರ್ಕಾರ ಹಠಾತ್ ಜಾರಿಗೊಳಿಸುವಿಕೆಯನ್ನು ಕೂಡಲೇ ಹಿಂಪಡೆಯಬೇಕು ಎಂದು ಒತ್ತಾಯಿಸಿ, ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯು ನಾಡಿದ್ದು ದಿನಾಂಕ 17ರ ಭಾನುವಾರ ಬೆಂಗಳೂರಿನಲ್ಲಿ 2ನೇ ರಾಜ್ಯ ಮಟ್ಟದ ಶಿಕ್ಷಣ ಉಳಿಸಿ ಸಮ್ಮೇಳನವನ್ನು ಸಂಘಟಿಸುತ್ತಿದೆ.

ರಾಷ್ಟ್ರೀಯ ಶಿಕ್ಷಣ ನೀತಿ-2020ರ ಪೂರ್ವ ತಯಾರಿಯಿಲ್ಲದ ಏಕಾಏಕಿ ಹೇರಿಕೆಯಿಂದಾಗಿ ಇನ್ನೂ ಪಠ್ಯಕ್ರಮ ಸಿದ್ದಗೊಂಡಿಲ್ಲ, ತರಗತಿಗಳು ಆರಂಭಗೊಂಡಿಲ್ಲ. ಹಾಗಾಗಿ ವಿದ್ಯಾರ್ಥಿ, ಶಿಕ್ಷಕರನ್ನೂ ತ್ರಿಶಂಕು ಸ್ಥಿತಿಗೆ ತಳ್ಳಿದೆ. ರಾಷ್ಟ್ರೀಯ ಶಿಕ್ಷಣ ನೀತಿ-2020 ಇಡೀ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಏಕರೂಪದ ಪಠ್ಯಕ್ರಮವನ್ನು ಹಾಗು ಏಕರೂಪದ ಬೋಧನಾ ವಿಧಾನ ಕ್ರಮವನ್ನು ಹೇರಲು ಮುಂದಾಗಿದೆ ಎಂದು ಸಮಿತಿಯ ಜಿಲ್ಲಾ ಘಟಕದ ಬಿ.ಎನ್. ನಾಗಜ್ಯೋತಿ ತಿಳಿಸಿದ್ದಾರೆ.

ಇದು ಶಿಕ್ಷಣವನ್ನು ಸಂಪೂರ್ಣ ಕಾರ್ಪೊರೇಟೀಕರಣಗೊಳಿಸಿ ಬಡ ಜನರಿಂದ ಶಿಕ್ಷಣವನ್ನು ಕಿತ್ತುಕೊಳ್ಳುವ ಹುನ್ನಾರವಾಗಿದೆ.

ಈ ಶಿಕ್ಷಣ ವಿರೋಧಿ ನೀತಿ ವಿರುದ್ಧ ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯು ರಾಜ್ಯ ಸಮ್ಮೇಳನವನ್ನು ಅ. 17ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನ ಯುವಿಸಿಇ ಅಲ್ಯುಮ್ನಿ ಹಾಲ್‌ನಲ್ಲಿ ನಡೆಸಲಿದೆ.



**ಶಿರಮಗೊಂಡನಹಳ್ಳಿಯಲ್ಲಿ ಸಡಗರದ ಉತ್ಸವ**


ಶಿರಮಗೊಂಡನಹಳ್ಳಿ ಗ್ರಾಮದ ಶ್ರೀ ಬಸವಣ್ಣ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಕಟ್ಟೆದುರ್ಗಮ್ಮ, ಶ್ರೀ ಹಟ್ಟಿ ದುರ್ಗಾಂಬಿಕೆ ದೇವಿ, ಶ್ರೀ ಯಲ್ಲಮ್ಮದೇವಿ ಬನ್ನಿ ಮಂಟಪಕ್ಕೆ ಅಂಬೊಡೆಯಲು ಸಡಗರದಿಂದ ಹೊರಟಿರುವುದು.

# ಖೋಟಾ ನೋಟು : ವೀಳ್ಯದೆಲೆ ಮಹಿಳಾ ವ್ಯಾಪಾರಿಗೆ ವಂಚನೆ

ದಾವಣಗೆರೆ, ಅ.15- ದಸರಾ ಪ್ರಯುಕ್ತ ವೀಳ್ಯದೆಲೆ ಮಾರಾಟಕ್ಕೆ ಬಂದಿದ್ದ ಮಹಿಳಾ ವ್ಯಾಪಾರಿಯೋರ್ವರಿಗೆ ಖೋಟಾ ನೋಟು ನೀಡಿ ವಂಚಿಸಿರುವ ಘಟನೆ ನಗರದಲ್ಲಿ ನಡೆದಿದೆ.

ಸರಸ್ವತಮ್ಮ ವಂಚನೆಗೊಳಗಾದ ವ್ಯಾಪಾರಿ. ಈಕೆ ನಗರದ ಆರ್.ಹೆಚ್. ಛತ್ರಕ್ಕೆ ಹೊಂದಿಕೊಂಡಿರುವ ಫುಟ್‌ಪಾತ್‌ನಲ್ಲಿ ವಿಜಯ ದಶಮಿ ಹಬ್ಬಕ್ಕೆ ಕಳೆದ 3 ದಿನಗಳಿಂದಲೂ ಹಗಲು, ರಾತ್ರಿ ವೀಳ್ಯದೆಲೆ ಮಾರುತ್ತಿದ್ದರು. ಅಂತೆಯೇ ಶುಕ್ರವಾರ ಮುಂಜಾನೆ 3 ಗಂಟೆ ಅವಧಿಯಲ್ಲಿ ಅವಸರದಲ್ಲಿ ಬಂದ ಇಬ್ಬರು ವ್ಯಕ್ತಿಗಳು 200 ರೂ. ಮುಖಬೆಲೆಯ ನೋಟು ನೀಡಿ, 30 ರೂ. ವೀಳ್ಯದೆಲೆಯನ್ನು ಎಲೆ ವ್ಯಾಪಾರಿಯಾದ ಸರಸ್ವತಮ್ಮನ ಬಳಿ ಖರೀದಿಸಿದ್ದಾರೆ.

ನಸುಕಿನಲ್ಲಿ ಕತ್ತಲು, ಚಳಿಯಲ್ಲಿ ವ್ಯಾಪಾರ ಮಾಡುತ್ತಿದ್ದ



ಎಲೆ ವ್ಯಾಪಾರಿ ಸರಸ್ವತಮ್ಮ 200 ರೂ. ನಕಲಿ ನೋಟನ್ನು ಅಸಲಿಯೆಂದು ಪಡೆದು, 170 ರೂ. ಚಿಲ್ಲರೆ ಮರಳಿಸಿ, 30 ರೂ. ವೀಳ್ಯದೆಲೆ ಕೊಟ್ಟಿದ್ದಾರೆ. ಆದರೆ, ಬೆಳಿಗ್ಗೆ ತಮ್ಮಲ್ಲಿದ್ದ ನೋಟನ್ನು ಬೇರೊಬ್ಬ ಗ್ರಾಹಕರಿಗೆ ನೀಡಲು ಹೋದಾಗ ಅದು ನಕಲಿ ನೋಟು ಎಂದು ಬೆಳಕಿಗೆ ಬಂದಿದೆ.

ಮಹಿಳೆ ತನ್ನ ಬಳಿ ಇದ್ದ ನಕಲಿ ನೋಟನ್ನು ತೋರಿಸಿ, ತನಗೆ ಹೀಗೆ ವಂಚಿಸಿದವರಿಗೆ ಏನು ಸಿಗುತ್ತದೋ ಗೊತ್ತಿಲ್ಲ. ಆದರೆ, ನನಗೆ 200 ರೂ.ಗೆ ಮೋಸ ಆಗಿದೆ. ಇದು ನನ್ನೊಬ್ಬಳದ್ದೇ ಅಲ್ಲ, ಹೀಗೆ ಹಗಲಿರುಳು ವ್ಯಾಪಾರ ಮಾಡುವ ನಮ್ಮಂತಹ ಬಡವರಿಗೆ ಮಾಡಿದ ಮೋಸವಾಗಿದೆ ಎಂದು ಅಳಲು ತೋಡಿಕೊಂಡರು.

ಜೆರಾಕ್ಸ್ ಅಂಗಡಿಯಲ್ಲಿ ಕಲರ್ ಪ್ರಿಂಟ್‌ನಲ್ಲಿ ತೆಗೆದ ಕಾಗದವನ್ನೇ ನೋಟಿನ ಗಾತ್ರಕ್ಕೆ ತುಂಡರಿಸಿ, ಕತ್ತಲಲ್ಲಿ ವ್ಯಾಪಾರ ಮಾಡುವ ಬಡ, ರೈತಾಪಿ ಜನರು, ಬಡ ಅನಕ್ಷರಸ್ಥ ಮಹಿಳೆಯರಿಗೆ ನೀಡಿ ವಂಚಿಸುತ್ತಿರುವುದು ಮಾರುಕಟ್ಟೆಯಲ್ಲಿ ಸಾಮಾನ್ಯವಾ ಗುತ್ತಿದೆ ಎಂಬ ಆಕ್ಷೇಪ ವ್ಯಕ್ತವಾಗುತ್ತಿದೆ.

## ಸ್ಪೇಟ್ ಪಾರ್ಕ್‌ನಿಂದ ದಾಂಡಿಯಾ ರಾಸ್



**ಎಸ್ಸೆಸ್, ರಶ್ಮಿ ರಂಗಪ್ಪ ಅವರಿಗೆ ಸನ್ಮಾನ**

ದಾವಣಗೆರೆ, ಅ.15- ನಗರದ ಸ್ವೆಟ್ ಫಿಟ್ನೆಸ್ ಪಾರ್ಕ್ ವತಿಯಿಂದ ಏರ್ಪಡಿಸ ಲಾಗಿದ್ದ ದಾಂಡಿಯಾ ರಾಸ್ ಕಾರ್ಯಕ್ರಮ ವನ್ನು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಉದ್ಘಾಟಿಸಿದರು.

ಮಿಸೆಸ್ ಇಂಡಿಯಾ ವಿಜೇತರಾದ ಶ್ರೀಮತಿ ರಶ್ಮಿ ರಂಗಪ್ಪ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಶ್ರೀಮತಿ ಲತಿಕಾ ಶೆಟ್ಟಿ, ಮಹಾನಗರ ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಮಾಜಿ ಮೇಯರ್ ಶ್ರೀಮತಿ ರೇಖಾ ನಾಗರಾಜ್ ಭಾಗವಹಿಸಿ, ದಾಂಡಿಯಾ ರಾಸ್‌ನಲ್ಲಿ ಹೆಜ್ಜೆ ಹಾಕಿದರು.

ಸ್ವೆಟ್ ಫಿಟ್ನೆಸ್ ಪಾರ್ಕ್‌ನ ಮಾಲೀಕ ರೂಪಿತ್ ನಾಗರಾಜ್ ಕಾರ್ಯಕ್ರಮವನ್ನು ಆಯೋಜಿಸಿದ್ದರು.

## ಗೋಶಾಲೆ ಜಾನುವಾರುಗಳಿಗೆ ಹುಲ್ಲು ನೀಡುವಂತೆ ಮನವಿ



ದಾವಣಗೆರೆ,ಅ.15- ಆವರಗೆರೆಯ ಶ್ರೀ ಭಗವಾನ್ ಮಹಾವೀರ ಗೋಶಾಲೆ ಯಲ್ಲಿರುವ 600 ಕ್ಕೂ ಹೆಚ್ಚು ಜಾನುವಾರುಗಳಿಗೆ ಹುಲ್ಲು ನೀಡುವಂತೆ ಗೋಶಾಲೆಯ ದಿನೇಶ್ ಕುಮಾರ್ ಅವರು ರೈತ ಬಾಂಧವರಲ್ಲಿ ಮನವಿ ಮಾಡಿದ್ದಾರೆ.

ಜಾನುವಾರುಗಳಿಗೆ ಹುಲ್ಲಿನ ಕೊರತೆಯಾಗಿದ್ದು, ಸುತ್ತಮುತ್ತಲಿನ ರೈತ ಬಾಂಧವರು ಹುಲ್ಲು ನೀಡುವಂತೆ ಅವರು ವಿನಂತಿಸಿಕೊಂಡಿದ್ದಾರೆ. ವಿವರಕ್ಕೆ ಜಿತೇಂದ್ರ ಕುಮಾರ್ (70199-81177), ದಿನೇಶ್ ಕುಮಾರ್ (99803-39333) ಅವರನ್ನು ಸಂಪರ್ಕಿಸಬಹುದು.

## ಡಾ. ಎಲಿ ಅವರಿಗೆ ರಾಜ್ಯೋತ್ಸವ ಪ್ರಶಸ್ತಿಗೆ ನಾಮನಿರ್ದೇಶನಕ್ಕೆ ಕರೆ



ದಾವಣಗೆರೆ, ಅ. 15 - ಕರ್ನಾಟಕ ಸರ್ಕಾರವು 2021ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಾಗಿ ಸಾರ್ವಜನಿಕ ವಲಯದಿಂದ ಅರ್ಹ ಅಭ್ಯರ್ಥಿಗಳನ್ನು ಸೂಚಿಸಲು ಆಹ್ವಾನಿಸಲಾಗಿದೆ.


ಈ ಹಿನ್ನೆಲೆಯಲ್ಲಿ ವೈದ್ಯ ಕ್ಷೇತ್ರದಲ್ಲಿ ಕಳೆದ 54 ವರ್ಷಗಳಿಂದ ಅನನ್ಯ ಸೇವೆ ಸಲ್ಲಿಸುತ್ತಿರುವ ಹಿರಿಯ ತಜ್ಞ ವೈದ್ಯರಾದ ಡಾ. ಎಸ್.ಎಂ. ಎಲಿ ಅವರನ್ನು ಆಯ್ಕೆ ಮಾಡಬೇಕೆಂದು ಅವರ ಅಭಿಮಾನಿ ಬಳಗದ ಸಂಚಾಲಕರೂ, ನಗರಸಭೆ ಮಾಜಿ ಅಧ್ಯಕ್ಷರೂ ಆದ ಬಿ. ವೀರಣ್ಣ ಕರೆ ನೀಡಿದ್ದಾರೆ.

ಡಾ|| ಎಲಿ ಅವರ ಹೆಸರನ್ನು ನಾಮನಿರ್ದೇಶನ ಮಾಡಲು ಸೇವಾ ಸಿಂಧೂ ಲಿಂಕ್ : https://sevasindhuservices.karnataka.gov.in/directApply.do?serviceId=1652, ನಾಮನಿರ್ದೇಶನ ವಿಧಾನದ ಮಾಹಿತಿ ಲಿಂಕ್ : https://youtu.be/m-Zup6fFthk, ನಾಮನಿರ್ದೇಶನ ಮಾಡಲು ಕೊನೆಯ ದಿನಾಂಕ : 16.10.2021.

## ಜಿಲ್ಲೆಯಲ್ಲಿ 1 ಪಾಸಿಟಿವ್, 1 ಸಾವು

ದಾವಣಗೆರೆ ಅ.15- ಜಿಲ್ಲೆಯಲ್ಲಿ ಒಬ್ಬರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ. ಇಬ್ಬರು ಗುಣಮುಖರಾದ ಬಗ್ಗೆ ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ. ಜಿಲ್ಲೆಯಲ್ಲಿ 33 ಸಕ್ರಿಯ ಪ್ರಕರಣಗಳಿದ್ದು, ಇಲ್ಲಿಯವರೆಗೆ 606 ಜನರು ಮೃತಪಟ್ಟಿದ್ದಾರೆ.


**ಪ್ರಥಮ ವರ್ಷದ ಪುಣ್ಯಸ್ಮರಣೆ**



**ಎ.ಎಂ. ಮಲ್ಲಿಕಾರ್ಜುನಯ್ಯ**

ವೀರಶೈವ ಸಮಾಜದ ಮುಖಂಡರು,
ಬಿ಼ಇಒ ಕಚೇರಿಯ ನಿವೃತ್ತ ಪತ್ರಾಂಕಿತ
ವ್ಯವಸ್ಥಾಪಕರು, ಹರಪನಹಳ್ಳಿ

ನೀವು ನಮ್ಮನ್ನಗಲಿ ಒಂದು ವರ್ಷವಾಯಿತು.
ನಿಮ್ಮ ಸ್ಮರಣೆ ಮತ್ತು ನೀವು ತೋರಿದ
ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ

**ಹನಗೋಡಿ ಮಠದ ವಂಶಸ್ಥರು ಹಾಗೂ ಬಂಧುಗಳು, ದಾವಣಗೆರೆ.**


## ಮಸೀದಿ ಮೇಲೆ ದಾಳಿ : 47 ಜನರ ಸಾವು

ಕಾಬುಲ್, ಅ. 15 – ಆಫ್ಘಾನಿಸ್ತಾನದ ಶಿಯಾ ಮಸೀದಿಯೊಂದರ ಮೇಲೆ ಆತ್ಮಹತ್ಯಾ ದಾಳಿ ನಡೆಸಲಾಗಿದ್ದು, ಕನಿಷ್ಠ 47 ಜನ ಸಾವನ್ನಪ್ಪಿದ್ದಾರೆ ಹಾಗೂ 70 ಜನ ಗಾಯಗೊಂಡಿದ್ದಾರೆ. ಕಂದಹಾರ್ ಪ್ರಾಂತ್ಯದಲ್ಲಿರುವ ಫತಿಮಿಯಾ ಮಸೀದಿಯ ಮೇಲೆ ದಾಳಿ ನಡೆಸಲಾಗಿದೆ. ಕಳೆದ ವಾರ ಉತ್ತರ ಆಫ್ಘಾನಿಸ್ತಾನದ ಶಿಯಾ ಮಸೀದಿಯೊಂದರ ಮೇಲೆ ನಡೆಸಲಾದ ದಾಳಿಯಲ್ಲಿ 46 ಜನ ಸಾವನ್ನಪ್ಪಿದ್ದರು.

## ದೇವರಗುಡ್ಡದ ಕಾರಣಿಕ

ರಾಣೇಬೆನ್ನೂರು, ಅ.15- ಇಲ್ಲಿನ ದೇವರಗುಡ್ಡದ ಕಾರಣಿಕ ಉತ್ಸವ ಶ್ರದ್ಧಾಭಕ್ತಿಗಳಿಂದ ಜರುಗಿತು. ದೇವರ ಗುಡ್ಡದ ಗೊರವಪ್ಪ ನಾಗಪ್ಪ 20 ಅಡಿ ಬಿಲ್ಲನ್ನೇರಿ ಕಾರಣಿಕ ನುಡಿದರು. ಕಾರಣಿಕ 'ಏರಿ ದೊರೆಯಾತಲೇ, ದೈವ ದರ್ಬಾರ್ ಆತಲೇ ಪರಾಕ್' ಎಂದಿದೆ.


**ಆತ್ಮೀಯ ಕೇಬಲ್ ಆಪರೇಟರ್‌ಗಳು ಮತ್ತು ನಮ್ಮೆಲ್ಲಾ ವೀಕ್ಷಕರಲ್ಲಿ ಮನವಿ**

ನಿಮ್ಮ ವಿಕ್ಟರಿ ಡಿಜಿಟಲ್ ನೆಟ್ವರ್ಕ್ ನ ಕಂಟ್ರೋಲ್ ರೂಮ್‌ನಲ್ಲಿ ಚಾನಲ್‌ಗಳ ಹೆಚ್ಚಿನ ಗುಣಮಟ್ಟದ ಪ್ರಸಾರಕ್ಕೆ ಸಂಬಂಧಿಸಿದ ತಾಂತ್ರಿಕ ಕೆಲಸಗಳು ಇರುತ್ತವೆ. ಆದ ಕಾರಣ ಇಂದು ಬೆಳಿಗ್ಗೆಯಿಂದ ಸಂಜೆ 6 ರವರೆಗೆ ಕೇಬಲ್ ಪ್ರಸಾರವು ಸಂಪೂರ್ಣವಾಗಿ ಇರುವುದಿಲ್ಲ ಮತ್ತು 4 ದಿನಗಳವರೆಗೆ ಕೇಬಲ್ ಪ್ರಸಾರದಲ್ಲಿ ವ್ಯತ್ಯಯವಾಗುತ್ತದೆ. ಆದ್ದರಿಂದ ತಾವುಗಳು ಸಹಕರಿಸಬೇಕಾಗಿ ಮನವಿ.

**ಮ್ಯಾನೇಜ್‌ಮೆಂಟ್, ವಿಕ್ಟರಿ ಡಿಜಿಟಲ್ ನೆಟ್ವರ್ಕ್ ಪ್ರೈವೇಟ್ ಲಿಮಿಟೆಡ್, ದಾವಣಗೆರೆ.**

ನಮ್ಮೆಲ್ಲಾ ಗ್ರಾಹಕರಿಗೆ ದಸರಾ ಹಾಗೂ ದೀಪಾವಳಿ ಹಬ್ಬದ ಶುಭಾಶಯಗಳು ಹಾಗೂ ಹಬ್ಬದ ಪ್ರಯುಕ್ತ

**ಭಾರೀ ರಿಯಾಯಿತಿ ದರದಲ್ಲಿ ಮಾರಾಟ**

ದಿನಾಂಕ 14.10.2021 ರಿಂದ 24.10.2021 ರವರೆಗೆ ಮಾತ್ರ



ನಂದಿ ಇಂಟೀರಿಯರ್ಸ್ & ಡಿಸೈನರ್ಸ್

Exclusive Interior Designers For Your Fantasy

NANDI INTERIORS & DESIGNERS

# 596 JAGALUR ROAD, YELEBETHUR VILLAGE, DAVANGERE.

+91 96202 31800, /01/02/03/04, 08192 297288, web www.nandiinteriorsanddesigner.com







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte